ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 2 ಸಂಚಿಕೆ : 17 ಸಪ್ಟೆಂಬರ್ 1 ರಿಂದ 15-1998 ಪುಟಗಳು : 24 ರೂ. 5



ಸ್ವತಂತ್ರ ಆದಿಯಿಂದ ಸ್ವಾತಂತ್ರ್ಯ ಸುವರ್ಣ ಮಹೋತ್ಸವದವರೆಗೆ
ನಮ್ಮ ರಾಷ್ಟ್ರಕಂಡ ಪ್ರಧಾನಿಗಳು

ಬೇ ಕಾ ಗಿ ದ್ದಾ ರೆ

ಕೊಡಗು ಸಂಗಾತಿಯ ಮಡಿಕೇರಿ ಕಛೇರಿ ಮತ್ತು ಕ್ಷೇತ್ರ ನಿರ್ವಾಹಕ [Field Worker] ರಾಗಿ ಕೆಲಸ ನಿರ್ವಹಿಸಲು ದ್ವಿಚಕ್ರವಾಹನ ಚಾಲನೆ ಅನುಭವವಿರುವ, ಕನಿಷ್ಠ ಪಿ.ಯು.ಸಿ. ಓದಿರುವ ಯುವಕ/ಯುವತಿಯರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ "ಕೊಡಗು ಸಂಗಾತಿ" ಕಛೇರಿಯನ್ನು ಪತ್ರದ ಮುಖೇನ ಸಂಪರ್ಕಿಸುವುದು.

—ಸಂಪಾದಕಿ

ನವೀಕರಿಸಿಕೊಳ್ಳಲು ಮನವಿ

ಬೆಂಗಳೂರಿನ ಚಂದದಾರರು "ಕೊಡಗು ಸಂಗಾತಿ" ಪಾಕ್ಷಿಕ ಪತ್ರಿಕೆಯ ಸದಸ್ಯತ್ವವನ್ನು ಈ ತನಕ ನವೀಕರಿಸದೆ ಇದ್ದಲ್ಲಿ, ದಿನಾಂಕ 13-9-1998ನೇ ಭಾನುವಾರದಂದು ಅನ್ಮಾಜೀರ ಪೊನ್ನಪ್ಪನವರ ಕಾವೇರಿನಾಡಿನಲ್ಲಿ ನಡೆಯಲಿರುವ ಕೈಲ್‌ಪೊಳ್ದ್ ಸಮಾರಂಭಕ್ಕೆ "ಕೊಡಗು ಸಂಗಾತಿ"ಯ ಬಾತ್ಮೀದಾರರು ಬಂದಾಗ ತಪ್ಪದೆ ವ್ಯನಹರಿಸಿ.

—ಸಂಪಾದಕಿ

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ
ಗೌರವ ಸಂಪಾದಕ :
ಪಟ್ಟಡ ಎಂ. ಪ್ರಭಾಕರ

ಮುದ್ರಕರು :
ಮಣ್ಣಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,
180/ಎ, 6ನೇ ಮುಖ್ಯ ರಸ್ತೆ,
ವಿನಾಯಕನಗರ, ಮೈಸೂರು-12

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :
ಕೊಡಗು ಸಂಗಾತಿ
ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮಿಪುರಂ, ಮೈಸೂರು-12.
ಫೋನ್ : 516771

ಮಡಿಕೇರಿಯ ನಮ್ಮ ವಿಳಾಸ
ಕೊಡಗು ಸಂಗಾತಿ
C/o ಸಂಗಾರ್ ಆಡಿಯೋ ವೀಡಿಯೊ
ಕೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ-571 201

ಒಳನೋಟ

ಪುಟಗಳು

ಅರೆ ಭಾಷೆಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ

50ನೇ ಸುವರ್ಣ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಪ್ರಧಾನಿಯವರ ಕೆಂಪುಕೋಟೆಯ ಭಾಷಣದಲ್ಲಿ ಯುವಕರ ಮತ್ತು ಮಹಿಳೆಯರ ಅಭಿವೃದ್ಧಿಗೆ ನೀಡಿದ ಆಶ್ವಾಸನೆ : ಭಾರತದ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಯುವಕ ಹಾಗೂ ಮಹಿಳೆಯರ ಪುರೋಭಿವೃದ್ಧಿಗೆ ಕೊಟ್ಟ ಆಶ್ವಾಸನೆ ಅಭಿನಂದನೀಯವಾದದು. ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ದಿಶೆಯಲ್ಲಿ ಹಲವಾರು ಇಂತಹ ಯೋಜನೆಗಳನ್ನು ಯುವಶಕ್ತಿಯ ಉಪಯೋಗಕ್ಕೆ ಹಮ್ಮಿಕೊಂಡಿದ್ದಾರೆ. ಇದರಲ್ಲಿ ಪ್ರಧಾನಮಂತ್ರಿಗಳ ರೋಜ್ಗಾರ್ ಯೋಜನೆಯೂ ಒಂದಾಗಿದೆ. ನಮ್ಮ ಯುವ ಸಂಘಟನೆ ಹಾಗೂ ಮಹಿಳಾ ಮಂಡಳಿಗಳು ಈ ಯೋಜನೆಗಳ ಸದುಪಯೋಗಕ್ಕೆ ಮುಂದೆ ಬರಬೇಕು.

ಕೇಂದ್ರ ಮತ್ತು ರಾಜ್ಯ ಸರ್ಕಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ಮಹಿಳೆಯರ ಹಾಗೂ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿದೆ. ಈ ಇಲಾಖೆಗಳ ಬಾಲವಿಕಾಸ ಯೋಜನೆ ಕಾರ್ಯಕ್ರಮದ ಮೂಲಕ 6 ವರ್ಷದೊಳಗಿನ ಮಕ್ಕಳ, ಗರ್ಭಿಣಿಯರ ಹಾಗೂ ಬಾಣಂತಿಯರ ಆರೋಗ್ಯ ಪೌಷ್ಟಿಕತೆ ಹಾಗೂ ಶಾಲಾ ಪೂರ್ವ ಶಿಕ್ಷಣ ಮುಂತಾದ ಸೇವೆಗಳನ್ನು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಒದಗಿಸಲಾಗುವುದು. ಇದಲ್ಲದೆ ಬ ಲಾಪರಾಧಿಗಳು ನಿರ್ಗತಿಕ, ಅನಾಥ ಮಕ್ಕಳಿಗಾಗಿ ಇವರ ಸರ್ವಾಂಗೀಣ ಬೆಳವಣಿಗೆಗೆ ಹಾಗೂ ಪುನರ್ ವಸತಿಗಾಗಿ ಶ್ರಮಿಸುತ್ತಿದ್ದರೆ ರಾಜ್ಯ ಸರ್ಕಾರ ಸ್ವಶಕ್ತಿ, ನವಚೇತನ, ಜಾಗೃತಿ, ಮಹಿಳಾ ಕಾನೂನು ಪದವೀಧರರಿಗೆ ಧನ ಸಹಾಯ, ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ಶಿಷ್ಯವೇತನ, ವೃತ್ತಿ ತರಬೇತಿ ಪಡೆಯುವ ಮಹಿಳೆಯರಿಗೆ ಆರ್ಥಿಕ ಸಹಾಯ ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ ಶಿಷ್ಯ ವೇತನ, ಗೃಹ ಕೈಗಾರಿಕೆಗಳಲ್ಲಿ ತರಬೇತಿ ನೀಡುವ ಮಹಿಳಾ ಸಮಾಜ ಮಂಡಳಿಗಳಿಗೆ ಅನುದಾನ, ವಿಧವಾ ವೇತನ, ಶಿಶುಪಾಲನಾ ಕೇಂದ್ರಗಳು, ನಿರ್ಗತಿಕ ಮಕ್ಕಳ ಕುಟೀರಗಳು. ಕೇಂದ್ರ ಸರ್ಕಾರದವರು ಉದ್ಯೋಗಸ್ಥ ಮಹಿಳೆಯರಿಗಾಗಿ ವಸತಿ ಗೃಹಗಳು, ಅಲ್ಪಾವಧಿ ವಸತಿಗಳು, ಶಿಶುಗೃಹಗಳನ್ನು ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಆರ್ಥಿಕ ಸಹಾಯ, ಸಾಮಾಜಿಕ ಭದ್ರತಾ ಕ್ಷೇತ್ರದಡಿ ಸ್ವಯಂ ಸೇವಾ ಸಂಸ್ಥೆಗಳಿಗೆ ನೆರವು. ರಾಷ್ಟ್ರೀಯ ಶಿಶುಪಾಲನಾ ಯೋಜನೆ ರಾಷ್ಟ್ರೀಯ ಹೆರಿಗೆ ಭತ್ಯೆ ಯೋಜನೆ, ಬಾಲಿಕ ಸಂವೃದ್ಧಿ ಯೋಜನೆ, ಮುಂತಾದ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಅದೇ ರೀತಿ ಯುವ ನಿರುದ್ಯೋಗಿಗಳಿಗೆ ತಮ್ಮ ಕಾಲ ಮೇಲೆ ನಿಲ್ಲಲು ಹತ್ತಿಪ್ಪತ್ತು ಯೋಜನೆಗಳನ್ನು ಮಾಡಿದ್ದಾರೆ. ಅಲ್ಲದೆ ಇನ್ನು ಹೆಚ್ಚಿನ ಯೋಜನೆಗಳನ್ನು ರೂಪಿಸುತ್ತಿದ್ದಾರೆ.

ಇವುಗಳಿಗೆ ಮಹಿಳಾ ಸಂಘಗಳು, ಮಹಿಳಾ ಘಟಕಗಳು ರಾಜ್ಯದಲ್ಲಿ ಆಯಾಯ ಜಿಲ್ಲೆಯ ಸಹಾಯಕ ನಿರ್ದೇಶಕರನ್ನು ಭೇಟಿ ಮಾಡಿ ವಿವರಗಳನ್ನು ಪಡೆದು ಕಾರ್ಯನಿರತರಾಗಬೇಕು. ಇದೇ ರೀತಿ ಜಿಲ್ಲಾ ಯುವ ಕೇಂದ್ರಗಳಿಗೆ ಯುವಕ ಸಂಘಗಳು ಸಂದರ್ಶನ ನೀಡಿ ಅವರ ಸಲಹೆಯಂತೆ ನಡೆದುಕೊಂಡರೆ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸಾಧ್ಯವಾಗುತ್ತದೆ. ಇದಕ್ಕೆ ಆಯಾಯ ಪಟ್ಟಣಗಳಲ್ಲಿ, ಗ್ರಾಮಗಳಲ್ಲಿ ಮಹಿಳಾ ಸಮಾಜಗಳನ್ನು ಹಾಗೂ ಯುವಕ ಸಂಘಗಳನ್ನು ಸ್ಥಾಪಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಯ ಫಲವನ್ನು ಪಡೆದುಕೊಂಡು ನಮ್ಮ ಸಮಾಜದ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಾದೀತೆಂದು ಸಂಗಾತಿ ಭಾವಿಸುತ್ತದೆ. ○

ಗೃಹ ಸಂಗಾತಿ : : ನಕ್ಷತ್ರ ಫಲ ಜಾತಕ

ಅಶ್ವಿನಿ : ಈ ನಕ್ಷತ್ರದ 1ನೇ ಪಾದವು ಮೇಷಾಂಶ, ಕುಜ ಅಧಿಪತಿ. ಹುಟ್ಟಿದ ಜಾತಕನು ಪರದ್ರವ್ಯಾಪಹಾರಕನೂ, ವ್ಯಭಿಚಾರಿಯೂ, ಲೋಭಿಯೂ, ಒಳ್ಳೆ ಸಾಹಸಗಾರನೂ, ಕಪಟಿಯು ಆಗುವನು. 2ನೇ ಪಾದಕ್ಕೆ ವೃಷಭಾಂಶ ಶುಕ್ರನಧಿಪತಿ–ಹುಟ್ಟಿದ ಜಾತಕನು ಜನರಲ್ಲಿ ವರ್ಚಸುಳ್ಳವನೂ, ಧರ್ಮಿಷ್ಟನೂ, ಸದ್ಗುಣಿಯೂ, ಧನಧಾನ್ಯ ಸಂಪನ್ನನೂ, ಮೃಷ್ಟಾನ್ನ ಭೋಜನ ಪ್ರಿಯನೂ ಆಗುವನು. 3ನೇಯ ಪಾದಕ್ಕೆ ಮಿಥುನಾಂಶ ಬುಧನದಿಪತಿ. ಇದರಲ್ಲಿ ಜನಿಸಿದ ಜಾತಕನು ಕಲಾಕುಶಲನೂ, ವಿದ್ಯಾವಂತನೂ, ಹಟಮಾರಿಯೂ, ಯುಕ್ತಿವಂತನೂ ಆಗುವನು. 4ನೆಯ ಪಾದಕ್ಕೆ ಕರ್ಕಾಂಶವು ಚಂದ್ರನಧಿಪತಿ. ಇದರಲ್ಲಿ ಜನಿಸಿದ ಜಾತಕನು ಸ್ವಧರ್ಮನಿಷ್ಟನೂ ಧನಿಕನೂ, ಗುರುಹಿರಿಯರಾಜ್ಞೆಯನ್ನೂ ಪಾಲಿಸತಕ್ಕವನೂ, ಪರೋಪಕಾರಿಯೂ, ಸ್ತ್ರೀಲೋಲನೂ ಆಗುವನು.

ಈ ನಕ್ಷತ್ರದ ಸಾರಾಂಶ ಜಾತಕಫಲ : ಈ ನಕ್ಷತ್ರದ ಆದಿಯಲ್ಲಿ ಎರಡು ಗಳಿಗೆಯಲ್ಲಿ ಜನಿಸಿದರೆ ಕೂಸಿಗೆ ಗಂಡಾಂತರ. ಹುಟ್ಟಿದ 1ನೇ ವರ್ಷದಲ್ಲಿ ಅಗ್ನಿಭಯ ಚಟುವಟಿಕೆ ಅಗ್ನಿಭಯ ಬೀಳುತ್ತದೆ. 2ನೇ ವರ್ಷದಲ್ಲಿ ಜ್ವರಭಯ, 3ನೆಯ ವರ್ಷದಲ್ಲಿ ಹೊಟ್ಟೆಶೂಲೆ, 5ನೆಯ ವರ್ಷದಲ್ಲಿ ವೃಣಸ್ಫೋಟಕ ಬಾಧೆ. 10ನೇ ವರ್ಷದಲ್ಲಿ ಜ್ವರಕಂಟಕ. 16 ಮತ್ತು 30ನೇ ವಯಸ್ಸಿನಲ್ಲಿ ಮೇಹರೋಗ 24ನೇ ವರ್ಷದಲ್ಲಿ ಪಶುಭಯ ಹಾಗೂ ಚೋರಭಯ. 32ನೇ ವರ್ಷದಲ್ಲಿ ಜ್ವರ ಗಂಡ. 40ನೇ ವರ್ಷದಲ್ಲಿ ಕಾಯಿಲೆ ಗಂಡಾಂತರ 40 ಮತ್ತು 50 ವಯಸ್ಸಿನಲ್ಲಿ ಶೀತ ಪಿತ್ತ ಬಾಧೆ 60 ಮತ್ತು 64ನೇ ವರ್ಷದಲ್ಲಿ ಮೇಂಧುವಿನ ಕಾಯಿಲೆ, ಇವು ಕಳೆದರೆ 70 ವರ್ಷ ಪರಮಾಯುಷ್ಯ.

"ಗಂಡು ಗಲಿ" ಕೊಡಕಂಡಿ ಕಾರ್ಯಪ್ಪ (ಬಾಬು)

ಕೊಡಕಂಡಿ ಕಾರ್ಯಪ್ಪ [ಬಾಬು] ಇವರನ್ನು ಅರಿಯದ ಕೊಡಗಿನ ಗೌಡರು ಇಲ್ಲವೆ ವಿರಳವೆಂದರೆ ಅತಿಶಯೋಕ್ತಿ ಆಗಲಾರದು. ಸಾಮಾನ್ಯವಾಗಿ ಮದುವೆ ಮುಂತಾದ ಸಮಾರಂಭಗಳಲ್ಲಿ ಇವರು ಮುಖಂಡತ್ವ ವಹಿಸುವರು. ಹಬ್ಬ ಹರಿದಿನಗಳಲ್ಲಿ ಆಗಲಿ, ಮದುವೆಯ ಸಮಾರಂಭವೇ ಆಗಲೀ ಇವರಿದ್ದರೆ ರಾಜನ ತಲೆಯಲ್ಲಿ ಕಿರೀಟವಿದ್ದಂತೆ ಸಮಾರಂಭಕ್ಕೆ ಕಳೆ ಕಟ್ಟುವುದು. ಇವರು ಸಾಧಾರಣ ಎತ್ತರದ ವಿಶಾಲವಾದ ಎದೆ, ಭುಜಗಳನು, ಹೊಂದಿ



ಕೊಡಕಂಡಿ ಕಾರ್ಯಪ್ಪ

ರುವ ಹಾಗೂ ದೊಡ್ಡ ಮೀಸೆಯ ಗಟ್ಟಿ ಮುಟ್ಟಾದ ಶರೀರವನ್ನು ಹೊಂದಿರತಕ್ಕಂತಹ ವ್ಯಕ್ತಿ. ಇವರ ಧ್ವನಿ ಎಂತಹ ಎದುರಾಳಿಯನ್ನು ಲಘು ಕಂಪನಕ್ಕೀಡು ಮಾಡುವುದು. ಚಿಕ್ಕ ಮಕ್ಕಳು ಅಥವಾ ಅಪರಿಚಿತರು ಇವರ ಘರ್ಜನೆಗೆ ನಡುಗದೆ ಇರಲಾರರು. ಇವರ ವ್ಯಕ್ತಿತ್ವ ವಜ್ರಾದಪಿ ಕಠಿಣವಾಗಿ ಕಂಡರೂ ಸಹ ಬಹಳ ಮೃದು ಸ್ವಭಾವದವರು. ಮದುವೆಯ ಮುಖ್ಯಸ್ಥರಾಗಿ ಇವರು ಬಹಳ ಲೀಲಾಜಾಲವಾಗಿ ಕಾರ್ಯ ಸಾಧಿಸುವರು. ಕೊಡಗಿನ ಗೌಡರ ಪದ್ಧತಿಯನ್ನು ಬಹಳಷ್ಟು ಸಮಗ್ರವಾಗಿ ತಿಳಿದಿದ್ದಾರೆ. ಇವರನ್ನು ನೋಡಿದ ಯಾರೇ ಆಗಲಿ, ಇವರು ಪೋಲಿಸ್ ಇಲ್ಲವೆ ಸೈನ್ಯಾಧಿಕಾರಿಯಾಗಿದ್ದರೆ ಎಷ್ಟು ಚೆನ್ನಾಗಿದ್ದಿರಬಹುದು ಎಂದು ಯೋಚಿಸದೆ ಇರಲಾರರು. ಇವರ ಅಣ್ಣ ಮಾದಪ್ಪನವರು ಪೋಲೀಸ್ ಅಧಿಕಾರಿಯಾಗಿ ನಿವೃತ್ತಿಯಾಗಿದ್ದಾರೆ. ಕಗ್ಗೋಡ್ಲಿನಲ್ಲಿ ನಡೆದ ಹಗ್ಗ ಎಳೆಯುವ ಪಂದ್ಯ [Tug of war]ದಲ್ಲಿ ಭಾಗವಹಿಸಿ ತಮ್ಮ ಐವತ್ತೆಂಟನೇ ವಯಸ್ಸಿನಲ್ಲೂ ತಮ್ಮ ಬಾಹುಬಲವನ್ನು ಪ್ರದರ್ಶಿಸಿ ಮೆರೆದ ಕೀರ್ತಿವಂತರು. ದೇವಸ್ಥಾನದಲ್ಲಿ ಕಾಯಿ ಎಳೆಯುವ ಪಂದ್ಯವಾಗಲಿ, ಕಾಯಿಗೆ ಗುಂಡು ಹೊಡೆಯುವ ಪಂದ್ಯವಾಗಲಿ ಇವರ ಬಾಹುಬಲ ಮತ್ತು ಚಾಣಾಕ್ಷತೆನದೆದುರು ಎದುರಾಳಿಗಳು ಸೋತು ಸೊರಗಿ ಹೋಗುವರು. ಇವರು ಒಂದು ಕಾಲದಲ್ಲಿ ಕುಡಿತದ ಚಟಕ್ಕೆ ಬಲಿಯಾಗಿ, ಅಣ್ಣ ಮಾದಪ್ಪನವರ ಬುದ್ಧಿವಾದಕ್ಕೆ ಮನ್ನಣೆ ನೀಡಿ ಕುಡಿತದ ಚಟದಿಂದ ಹೊರಬಂದು ಸುಮಾರು ಇಪ್ಪತ್ತು ವರುಷಗಳಾದವು. ಬೈನೆ ಸೇಂದಿಯನ್ನು ಸಹ ಅವರು ಮುಟ್ಟುವುದಿಲ್ಲ.

ಶ್ರೀಯುತರ ಶ್ರೀಮತಿ ಗಂಗಮ್ಮ ಪುದಿಯನೆರವನ ಮನೆಯವರಾಗಿದ್ದು, ಇಬ್ಬರು ಗಂಡು ಮಕ್ಕಳಲ್ಲಿ ಹಿರಿಯ ಅಜಿತ, ಬೆಂಗಳೂರಿನಲ್ಲಿ ಕೆಲಸದಲ್ಲಿ ಇದ್ದರೆ, ಕಿರಿಯ ರಮೇಶ ಆಸ್ತಿಯ ಉಸ್ತುವಾರಿ ನೋಡಿಕೊಂಡು ತಂದೆ ತಾಯಿಯರಿಗೆ ನೆರವಾಗಿದ್ದಾನೆ

ಗೌಡ ಜನಾಂಗದಲ್ಲೇ ಅಪರೂಪದ ವ್ಯಕ್ತಿತ್ವ ಇರುವ ಶ್ರೀಮಾನ್ ಕೊಡಕಂಡಿ ಕಾರ್ಯಪ್ಪ [ಬಾಬು]ರವರಿಗೆ ಹಾಗೂ ಅವರ ಕುಟುಂಬಕ್ಕೆ ನಮ್ಮ ಕುಲದೇವತೆಯಾದ ಶ್ರೀ ತಿರುಪತಿ ವೆಂಕಟರಮಣನ ಅನುಗ್ರಹ ಸದಾ ಇರಲೆಂದು ಸಮಸ್ತ ಗೌಡ ಜನಾಂಗದ ಪರವಾಗಿ ಸಂಗಾತಿ ಪ್ರಾರ್ಥಿಸುತ್ತದೆ.

○ ಬಿಟ್ಟೀರ ಚೋಂದಮ್ಮ ಶಂಭು

ಉದ್ಯೋಗವಾರ್ತೆ : ಸೇನೆಗೆ ಭರ್ತಿ

ಕೊಡಗು ಮತ್ತು ಹಾಸನ ಜಿಲ್ಲೆಯ ಅರ್ಹ ಯುವಕರನ್ನು ಸೇನೆಗೆ ಆಯ್ಕೆ ಮಾಡುವ ಸಂಬಂಧದಲ್ಲಿ ದಿನಾಂಕ ಸೆಪ್ಟೆಂಬರ್ 21 ರಂದು ಬೆಳಿಗ್ಗೆ 7 ಗಂಟೆಗೆ ಮಂಗಳೂರಿನ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಬಳಿ ಇರುವ ಮಂಗಳಾ ಸ್ಟೇಡಿಯಂನಲ್ಲಿ ಆಯ್ಕೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಕೊಡಗು ಜಿಲ್ಲಾ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖಾ ಉಪ ನಿರ್ದೇಶಕರು ತಿಳಿಸಿದ್ದಾರೆ.

ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ಯುವಕರಿಗೆ ಸೇನೆಗೆ ಸೇರಲು ದಿನಾಂಕ 30-11-75 ಮತ್ತು 30-11-82ರೊಳಗೆ ಜನಿಸಿದವರಾಗಿರಬೇಕು. ಎತ್ತರ 165 ಸೆ.ಮೀ. ತೂಕ 50 ಕೆ.ಜಿ. ಹಾಗೂ ಎದೆಯಳತೆ 77ರಿಂದ 82 ಸೆ.ಮೀ. ಇರಬೇಕು. ಎಸ್.ಎಸ್.ಎಲ್.ಸಿ. ತೇರ್ಗಡೆಯಾಗದ ಯುವಕರು ಸೇನೆಗೆ ಸೇರಲು 31-11-73 ಮತ್ತು 30-8-82ರೊಳಗೆ ಜನಿಸಿರಬೇಕು. ಎತ್ತರ 163ಸೆ.ಮೀ. ತೂಕ 43 ಕೆ ಜಿ. ಹಾಗೂ ಎದೆಯಳತೆ 77ರಿಂದ 82 ಸೆ.ಮೀ. ಇರಬೇಕು.

ಅಭ್ಯರ್ಥಿಯು ಮೇಲ್ಕಂಡ ದಿನಾಂಕದಂದು ನಡೆಯುವ ಆಯ್ಕೆ ಕಾರ್ಯಕ್ರಮಕ್ಕೆ ಹಾಜರಾಗುವಾಗ ವಿದ್ಯಾರ್ಹತೆ ಮತ್ತು ಇತರ ಪ್ರಮಾಣ ಪತ್ರಗಳ ಮೂಲ ಪ್ರತಿ ಮತ್ತು 3 ಸೆಟ್ ಜೆರಾಕ್ಸ್ ಪ್ರತಿಗಳನ್ನು, ಇತ್ತೀಚಿನ 7 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಹೊಂದಿರಬೇಕು. ಮಾಜಿ ಸೈನಿಕರ ಮಕ್ಕಳಾಗಿದ್ದಲ್ಲಿ ತಂದೆಯ ಸೈನ್ಯದ ಡಿಸ್ಚಾರ್ಜ್ ಸರ್ಟಿಫಿಕೇಟ್ ಮತ್ತು ಅದರ ಮೂರು ದೃಢೀಕರಿಸಲ್ಪಟ್ಟ ಜೆರಾಕ್ಸ್ ಪ್ರತಿಗಳನ್ನು ಹೊಂದಿರಬೇಕೆಂದು ಅವರು ತಿಳಿಸಿದ್ದಾರೆ.

ವಲಸೆಗಾರರಲ್ಲ

ಚೇಂದ್ರಿಮಾಡ ಗ. ಮುತ್ತಪ್ಪ
ಕುಶಾಲನಗರ.

ಭಾರತದಲ್ಲಿ ವಲಸೆಯ ರೂಢಿ ಸನಾತನವಾದದ್ದು. ಹವಮಾನ, ಪ್ರಕೃತಿ ಕೋಪ, ಹೊಟ್ಟೆಗೆ ಹಿಟ್ಟಿನ ಚಿಂತೆ ಹೀಗೆ ಹಲವಾರು ಕಾರಣಗಳಿಂದ ಜನರು ಪುರಾತನ ಕಾಲದಿಂದಲೇ ವಲಸೆ ಹೋಗುತ್ತಿದ್ದರು. ಹಾಗೆಯೆ ಕೊಡಗಿನಲ್ಲಿಯೂ ಸ್ಥಳೀಯರು, ವಲಸೆಗಾರರೆಂಬುದು ಒಂದಾನೊಂದು ಕಾಲಕ್ಕೆ ಸರಿಹೋಗಿದೆ. ಅದನ್ನು ಅಲ್ಲಗಳೆಯಲಾಗದು. ಈ ಬರಹ ಕೊಡಗಿನ ಕೊಡವರಿಗೂ, ಅರೆಭಾಷೆ ಗೌಡರಿಗೂ ಸಂಬಂಧಿಸಿದ್ದು, ಕೆಲವು ಪತ್ರಿಕೆಗಳಲ್ಲಿ ಗೌಡರು ಒಲಸೆಗಾರರಲ್ಲ ಎಂಬುದಾಗಿ ಬರೆದರು. ಹಾಗಾದರೆ ಕೊಡವರಿಗಿಂತ ಹಿಂದೆ ಇದ್ದವರೇ ?

ಈಗ ಏಕೆ ಆ ಪ್ರಶ್ನೆ ಉದ್ಭವಿಸಿತು ? ವಲಸೆಗಾರರು ಯಾರು ? ಹೊಟ್ಟೆಪಾಡಿಗಾಗಿ ವೃತ್ತಿ, ಆಹಾರವನ್ನು ಹುಡುಕಿಕೊಂಡು ಅಲೆದಾಡುವವರು ವಲಸೆಗಾರರು. ಕೆಲವು ಕಡೆ ಅವರು ನೆಲೆ ನಿಲ್ಲುವರು. ಕೆಲವು ಕಡೆ ವಲಸೆ ಹೋಗುವುದನ್ನು ಕಸುಬಾಗಿ ಮಾಡಿಕೊಳ್ಳುವರು. ಕೊಡಗಿನ ಅಂದಿನ ಪರಿಸ್ಥಿತಿಯನ್ನು ಇಣುಕಿನೋಡುವ. 1785ರಲ್ಲಿ ಮುಸಲ್ಮಾನರ [ಹೈದರಾಲಿ, ಟಿಪ್ಪು] ಧಾಳಿಯಿಂದ ಕೊಡವರ ಸಂಖ್ಯೆ ಕಡಿಮೆಯಾಯಿತು. ಫಲವತ್ತಾದ ಜಮೀನು ಪಾಳುಬೀಳುವ ಪರಿಸ್ಥಿತಿ ಬಂತು. ವೀರರಾಜರಿಗೆ ಪ್ರಜೆಗಳ ಸಂಖ್ಯೆ ಅತೀ ಕಡಿಮೆಯಾಯಿತು. ಅಂಥ ಸಮಯದಲ್ಲಿ ಈಗಿನ ದಕ್ಷಿಣ ಕನ್ನಡದ ವ್ಯವಸಾಯಗಾರರನ್ನು ಆಮಂತ್ರಿಸಿದರು. ಆ ಆಮಂತ್ರಣವನ್ನು ಸ್ವೀಕರಿಸಿ ಬಂದವರು ಇಂದಿನ ಅರೆಭಾಷೆ ಗೌಡರು. ಇವರು ವಲಸೆ ಬರಲಿಲ್ಲ. ವಲಸೆಗಾರರಲ್ಲ. ಆಮಂತ್ರಣದಲ್ಲಿ ಬಂದವರು.

ಇಲ್ಲಿಗೆ ಬಂದು ಇಲ್ಲಿಯ ಫಲವತ್ತಾದ ಜಮೀನನ್ನು ಸಾಗುಗೊಳಿಸಿ, ವೀರರಾಜನ ಪ್ರಜೆಗಳಾದವರು. ನಮ್ಮ ಆಮಂತ್ರಣದ ಬಂಧುಗಳು. ಇವರಿಗೆ ಜಮೀನಿದೆ, ಕೋವಿ ಇದೆ. ಅಂದಿನ ರಾಜ ಪೋಷಕವಾದ ಕುಪ್ಪಸ, ದಟ್ಟಿ, ಪೀಚೆಕತ್ತಿ, ಮಂಡೆತುಣಿಯಲ್ಲಿ ಮೆರೆದು, ಸ್ಥಳೀಯರೊಂದಿಗೆ ಬೆರೆತು ಸ್ಥಳೀಯ ಹಬ್ಬಗಳಾದ ಬಿಸು, ಕೈಲ್ ಪೊಳ್ದ್, ಕಾವೇರಿ ಚಂಗ್ರಾಂದಿ, ಹುತ್ತರಿಗಳನ್ನೆಲ್ಲ ಸದಾ ಆಚರಿಸಿ, ಕೊಡಗಿನಲ್ಲಿ ಕೊಡವರಾಗಿ, ಕೊಡವರೊಟ್ಟಿಗೆ ಕಲೆತು, ಬೆರೆತು ಬಾಳಿದ ವಂಶ. ಭಾಷೆ, ಪದ್ಧತಿಗಳಲ್ಲಿ, ಸ್ತ್ರೀಯರ ಉಡುಪಿನಲ್ಲಿ ಬದಲಾವಣೆ ಕಂಡರೂ ಕೊಡಗಿನ ಸಂಸ್ಕೃತಿ, ಸಂಪ್ರದಾಯದವರು. ಕೊಡವರಿಲ್ಲದೆ ಇವರು ಬದುಕಲಾರರು. ಗೌಡರಿಲ್ಲದೆ ಕೊಡವರು ಬದುಕಲಾರರು. ಕೊಡವರು, ಗೌಡರು ಕೊಡಗಿನ ನಾಣ್ಯದ 2ಮುಖಗಳು, ಇಷ್ಟು ವರುಷ ಸಹಬಾಳ್ವೆಯಲ್ಲಿ ಬೆಳೆದಿರುವವರು ಈಗ ಏಕೆ ವೈಷಮ್ಯ ಕಾರುತ್ತಿರುವುದು ?

ಕಾರಣ ಇಷ್ಟೆ. ಹಿರಿಯರು, ಅನುಭವಿಗಳು, ರಾಜಕಾರಣಿಗಳು, ಬುದ್ಧಿಜೀವಿಗಳೆಂದು ಹೇಳಿಕೊಳ್ಳುವವರು ತಮ್ಮ ಸ್ವಾರ್ಥಕ್ಕಾಗಿ ಜನರನ್ನು ಬಲಿಪಶುಗಳಾಗಿ ಮಾಡುತ್ತಿದ್ದಾರೆ. ಕೆಲವು ಪತ್ರಿಕೆಗಳೂ ಇದನ್ನು ಪ್ರಚೋದಿಸುತ್ತದೆ. ವ್ಯಾಜ್ಯ, ಜಗಳ ವೈಷಮ್ಯಗಳಿಂದ ಕಟ್ಟಿದ ರಾಜ್ಯ ಉನ್ನತಿಯಾಗಿಲ್ಲ. 2 ಮಹಾಯುದ್ಧಗಳು ಕಳೆದವು. ಶಾಂತಿ, ನೆಮ್ಮದಿ ಸಿಗಲಿಲ್ಲ. ಶಾಂತಿ, ಪ್ರೀತಿಗಾಗಿ ಹಂಬಲಿಸಬೇಕು. ಪ್ರೀತಿ, ಸಹಬಾಳ್ವೆ, ಸಹನೆ, ಸಲಗೆ ಇವೇ ನಮ್ಮೀ ಜೀವಾಳ.

ಇನ್ನಾದರೂ ಜನಾಂಗದ ಹಿರಿಯರು ಕಿರಿಯರಿಗೆ ಒಳ್ಳೇ ಮಾರ್ಗದರ್ಶನ ನೀಡಲಿ. ಬೇರ್ಪಡಿಸುವ, ಪ್ರಚೋದಿಸುವ ಮಾತುಗಳಿಗೆ ಕಡಿವಾಣ ಹಾಕಲಿ. ಒಂದಾಗಿ ಹೊಂದಾಣಿಕೆಯಿಂದ ಬದುಕಿ ಬಾಳುವುದನ್ನು, ಪ್ರೀತಿ ವಿಶ್ವಾಸವನ್ನು ಮೂಡಿಸಲಿ. ಜನಾಂಗ, ಜನಾಂಗಕ್ಕೆ ಬೇರ್ಪಡೆ ಬೇಡ, ಸೇರ್ಪಡೆ ಬೇಕು. ನನ್ನ ಒಂದೇ ಒಂದು ಆಸೆ ಕೊಡವ, ಗೌಡ ಜನಾಂಗ ಒಂದಾಗಿ ಒಮ್ಮತ, ಒಗ್ಗಟ್ಟಿನಿಂದ ಬಾಳುವುದನ್ನು ನೋಡಿ ಸತ್ತರೆ, ಅದೇ ನನಗೆ ವೀರ ಮರಣ. ಪತ್ರಿಕೆಗಳು ಈ ನಿಟ್ಟಿನಲ್ಲಿ ಮಹಾಪಾತ್ರ ವಹಿಸಲಿ.

ವಿ. ಸೂ. : [ಈ ಮೇಲಿನ ಟಿಪ್ಪಣಿಗಳಿಗೆ ಸುಳ್ಯ, ಪುತ್ತೂರು, ಸೀಮೆಯಿಂದ ಮಾತ್ರವಲ್ಲ, ಐಗೂರು ಸೀಮೆಯಿಂದಲೂ ಜನರನ್ನು ಕೊಡಗಿನ ರಾಜ ಆಮಂತ್ರಿಸಿದ್ದಾನೆ. ಅಂದಿನ ರಾಜರ ಆಳ್ವಿಕೆಯ ವಿಶಾಲ ಕೊಡಗು [Greater Coorg], ಪಶ್ಚಿಮಕ್ಕೆ ಸುಳ್ಯ, ಪುತ್ತೂರು, ಸುಬ್ರಮಣ್ಯ, ಪಾಣೆ ಮಂಗಳೂರಿನ ತನಕವೂ, ಪೂರ್ವಕ್ಕೆ ಪಿರಿಯಪಟ್ಟಣವು, ಉತ್ತರಕ್ಕೆ ಅರಕಲಗೂಡು, ಸಕಲೇಶಪುರ ಸೀಮೆಯನ್ನು ಮಂಜರಾಬಾದ್, ಐಗೂರು ಸೀಮೆಯನ್ನು ಸಹ ಒಳಗೊಂಡಿತ್ತು. 1834ರಲ್ಲಿ ಕೊಡಗಿಗೆ ಬ್ರಿಟಿಷರ ಆಗಮನದಿಂದಾಗಿ ಅವರ ಕುತಂತ್ರದಿಂದ ಜನಾಂಗವನ್ನು ಒಡೆದು ಆಳುವ ನೀತಿಯಿಂದ, ಕೊಡಗು ಈಗಿನ 3 ತಾಲ್ಲೂಕುಗಳಿಗೆ ಸೀಮಿತವಾಗಿರುವುದು ಕೊಡಗು ನಾಡಿನ ದುರ್ಧೈವವೆಂದು ತಿಳಿಸಲು ಸಂಗಾತಿ ಇಚ್ಛಿಸುತ್ತದೆ. —ಸಂಪಾದಕಿ]

ವಿ. ಸೂ. : ಕಳೆದ ಸಂಚಿಕೆಯಲ್ಲಿ ಈ ಲೇಖನವು ಪ್ರಕಟಗೊಂಡಿತ್ತಾದರೂ ಅದಕ್ಕೆ ತಕ್ಕುದಾದ ಶೀರ್ಷಿಕೆಯನ್ನು ಪ್ರಕಟಿಸದ ಕಾರಣ ಈ ಲೇಖನವನ್ನು ಮತ್ತೊಮ್ಮೆ ಪ್ರಕಟಿಸಲಾಗಿದೆ. ಓದುಗರು ಸಹಕರಿಸಬೇಕಾಗಿ ವಿನಂತಿ. —ಸಂ.

ಹೆಣ್ಣು ಸಮಾಜದ ಕಣ್ಣು

ಹೆಣ್ಣು ಸಮಾಜದ ಕಣ್ಣು, ಸಂತೋಷದ ಮೂಲ. 'ಯತ್ರ ನಾರ್ಯಸ್ತು ಪೂಜ್ಯತೇ ರಮಂತೇ ತತ್ರದೇವತಾ.' ಹೆಣ್ಣು ತಾನು ಅಬಲೆಯಲ್ಲ ಸಬಲೆ ಎಂಬುದನ್ನು ತಾನು ಅನೇಕ ಘನ ಕಾರ್ಯಗಳನ್ನು ಮಾಡುವುದರ ಮೂಲಕ, ಸಾಧಿಸುವುದರ ಮೂಲಕ ತೋರಿಸಿಕೊಟ್ಟಿದ್ದಾಳೆ. ಹರಿಹರರು ಅವಳಿಗೆ ಸೋತಿದ್ದಾರೆ. ಲೋಕ ರಕ್ಷಕರಾದ ತ್ರಿಮೂರ್ತಿಗಳೇ ಹೆಣ್ಣಿನ ಆಶ್ರಯ ಪಡೆದರೆಂದ ಮೇಲೆ ನಮ್ಮಂಥ ಸಾಮಾನ್ಯ ಮನುಷ್ಯರು ಹೆಣ್ಣಿಗೆ ಶರಣಾಗಿ ಅವಳ ಕೃಪಾ ಕಟಾಕ್ಷಕ್ಕಾಗಿ ಹಾತೊರೆಯುವುದರಲ್ಲಿ ತಪ್ಪೇನಿಲ್ಲ ಮತ್ತು ಆಶ್ಚರ್ಯಕರ ಸಂಗತಿಯೂ ಅಲ್ಲ.

ರಾಮಾಯಣದಲ್ಲಿ ಶ್ರೀರಾಮ ಹಿಡಿದ ಬಿಲ್ಲು ಕೋದಂಡ. ಆತ ಮುರಿದ ಬಿಲ್ಲು ಶಿವಧನುಸ್ಸು. ಈ ಬಿಲ್ಲುಗಳ ಮುಂದೆ ನಾರಿಯು ತೃಣ ಮಾತ್ರವಾಗಿದ್ದಿರಬಹುದು. ಬಲದಲ್ಲಾಗಲೀ, ಆಕಾರದಲ್ಲಾಗಲೀ ನಾರಿಗಿಂತ ಮಿಗಿಲಾದರೂ, ಬಲಿಷ್ಠವಾದ ಬಿಲ್ಲು ಸಹ ನಾರಿಗೆ ಸೋತಿಲ್ಲವೇ ? ಹೆಸರಾಂತ ಬಿಲ್ಲುಗಾರನಾದ ಭೀಷ್ಮನಿಗೆ ಕುರುಕ್ಷೇತ್ರ ರಣರಂಗದಲ್ಲಿ ಮುಖಾಮುಖಿಯಾಗಿ

ಕೆದಂಬಾಡಿ ಜಿ. ಶಾಂತಿ

ನಿಂತ ವ್ಯಕ್ತಿಯೇ 'ಶಿಖಂಡಿ'. ಕಾಶಿರಾಜನ ಮಗಳಾಗಿ ಜನಿಸಿದ 'ಅಂಬೆ'ಯು ಭೀಷ್ಮನ ಮೇಲಿನ ಸೇಡು ತೀರಿಸಿಕೊಳ್ಳಲು 'ಶಿಖಂಡಿ'ಯಾಗಿಯೇ ಜನ್ಮ ತಾಳಿದಳು. ಈಕೆಯ ಎದುರು ನಿಂತು ಯುದ್ಧ ಮಾಡದ ಭೀಷ್ಮನು ಶಸ್ತ್ರತ್ಯಾಗ ಮಾಡಿ ಶರಶಯ್ಯೆಯಲ್ಲಿ ಮಲಗಿದ ಎಂದು ಕೇಳಿದ್ದೇವೆ. ಹೀಗಾಗಿ ನಾರಿಗಿಂತ ಬಲಿಷ್ಠರಾದವರು ಯಾರೂ ಇಲ್ಲವೆನ್ನಬಹುದು.

ಹೆಣ್ಣು ತಾಯಿಯಾಗಿ, ಅತ್ತೆಯಾಗಿ, ಸೊಸೆಯಾಗಿ, ಮಗಳಾಗಿ, ಮಡದಿಯಾಗಿ, ಸೋದರಿಯಾಗಿ, ಅತ್ತಿಗೆಯಾಗಿ ಕುಟುಂಬದ ಅವಿಭಾಜ್ಯ ಅಂಗವಾಗಿದ್ದಾಳೆ. ಆಕೆ ತಾಯಿಯಾಗಿ ತೋರುವ ಪ್ರೀತಿ, ಮಮತೆ, ವಾತ್ಸಲ್ಯ ಅತ್ಯಂತ ಶ್ರೇಷ್ಠವಾದುದು. ಆಕೆ ಪ್ರೇಮಮಯಿ, ವಾತ್ಸಲ್ಯಮಯಿ, ಹೆಣ್ಣು ಬೆಳಗುವುದು, ಆಕೆಯ ಹಿರಿಮೆ ಎದ್ದು ಕಾಣುವುದು ತಾಯಿಯ ಪಾತ್ರದಲ್ಲಿ. ಆಕೆ ಪೂಜನೀಯಳು. ಪ್ರಪಂಚದಲ್ಲಿ ಕೆಟ್ಟ ಮಕ್ಕಳು ಇರಬಹುದು. ಆದರೆ ಕೆಟ್ಟ ತಾಯಂದಿರು ಇರುವುದಿಲ್ಲ. ಎಂತಹ ಕಷ್ಟ ಪರಿಸ್ಥಿತಿಯಲ್ಲೂ ಆಕೆ ಮಕ್ಕಳನ್ನು ಕೈಬಿಡಲಾರಳು. ಅವರಿಗಾಗಿ ಎಂತಹ ನೋವನ್ನಾದರೂ ಅನುಭವಿಸಲು ಆಕೆ ಸದಾ ಸಿದ್ಧ.

ಜೀವನದಲ್ಲಿ ನೆಮ್ಮದಿಯನ್ನು ಕಾಣಲು, ಪ್ರಾಪಂಚಿಕ ಜೀವನದಲ್ಲಿ ಸಾರ್ಥಕತೆಯನ್ನು ಪಡೆಯಲು, ಹಲವು ಕಾರ್ಯ ಸಾಧನೆಗಳಿಗೂ ಹೆಣ್ಣಿನ ನೆರವು ಮತ್ತು ಆಕೆಯ ಸಹಕಾರ ಅತ್ಯಗತ್ಯ ಎನ್ನುವುದನ್ನು ನಾವು ಮನಗಂಡಿದ್ದೇವೆ.

ಗುರುಹಿರಿಯರ ಸೇವೆ ಮಾಡುವುದು, ಅತ್ತೆ-ಮಾವಂದಿರಲ್ಲಿ ಮತ್ತು ವೃದ್ಧಮಾತಾಪಿತೃಗಳಲ್ಲಿ ಗೌರವ, ಅತಿಥಿ ಸತ್ಕಾರ, ತಾಳ್ಮೆ, ಪರೋಪಕಾರ ಬುದ್ಧಿ, ಪ್ರೀತಿ, ಸದಾಚಾರದಲ್ಲಿ ನಡೆಯುವುದು, ಧರ್ಮಬಾಹಿರ ಕೃತ್ಯಗಳನ್ನು ಮಾಡದಿರುವುದು, ಕುಟುಂಬದ ನೆಮ್ಮದಿಗಾಗಿ ತನ್ನ ಸಂಸಾರಕ್ಕಾಗಿ ಜೀವನದ ಉದ್ದಕ್ಕೂ ತ್ಯಾಗಮಯಿಯಾಗಿ ಜೀವ ಸವೆಸುವ ಸದ್ಗುಣವನ್ನು ಹೆಣ್ಣು ಹೊಂದಿದ್ದಾಳೆ. ಗಂಡನ ಯಶಸ್ಸಿಗೆ ಹೆಣ್ಣು ಕಾರಣಳಾಗಿರುತ್ತಾಳೆ. ಕಾರ್ಯಶೀಲನಾದ ಗಂಡಿಗೆ ಸ್ಫೂರ್ತಿ ನೀಡುತ್ತಾಳೆ. ಆತನ ಸಾಧನೆಯಲ್ಲಿ ಭಾಗಿಯಾಗಿ, ಮೆಚ್ಚಿ ಪ್ರೋತ್ಸಾಹಿಸುತ್ತಾಳೆ. 'Behind every sucessful man there is a women' ಎಂಬುದು ಅಕ್ಷರಶಃ ಸತ್ಯ. ಹೆಣ್ಣು ಉದಾತ್ತ ಗುಣಗಳ ಗಣಿ. ಆದರೆ ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ' ಎಂಬುವುದನ್ನು ನಾವು ಕಡೆಗಣಿಸುವಂತಿಲ್ಲ.

'ಹೆಣ್ಣು ಮುನಿದರೆ ತಿದ್ದು ವಣ್ಣಗಳ
ನಾ ಕಾಣೆ ಹೆಣ್ಣೊಳಮೃತವು
ವಿಷವುಂಟು-ಉಣಬಲ್ಲ ಅಣ್ಣಗಳು
ಯಾರು ಸರ್ವಜ್ಞ'—ಎಂದು ಸರ್ವಜ್ಞನು ತನ್ನ ವಚನದಲ್ಲಿ ಹೇಳಿದ್ದಾನೆ.

ಹೆಣ್ಣಿನ ಮನಸ್ಸು ಕೆಟ್ಟರೆ, ಅಸಮಾಧಾನವುಂಟಾದರೆ, ಆಕೆ ಕೋಪಗೊಂಡರೆ, ಉದ್ರೇಕಗೊಂಡರೆ ಆಕೆಯನ್ನು ಸಮಾಧಾನ ಪಡಿಸುವುದು ಅಸಾಧ್ಯ. ಆ ಪ್ರಯತ್ನಕ್ಕೆ ಕೈಹಾಕುವುದಾದರೆ ಆತನಿಗೆ ಸೋಲು ಖಚಿತ ಎನ್ನುವುದು ಈ ವಚನದ ಸಾರಾಂಶ. ಹೆಣ್ಣಿಗೆ ಅಮೃತವನ್ನುಣಿಸುವ ಗುಣವೂ ಇದೆ. ನಾರಿ ಸ್ವರ್ಗಕ್ಕೆ ದಾರಿ, ನಾರಿ ಸಕಲರಿಗೆ ಹಿತಕಾರಿ ಆದರೆ, ನಾರಿ ಮುನಿದರೆ ಮಾರಿ.

'ಸರ್ವೇಜನ ಸುಖಿನೋ ಭವಂತು' ಎಂಬುವುದೇ ಹೆಣ್ಣಿನ ಬಾಳಿನ ಗುರಿ. ಆಕೆಯನ್ನು 'ಕ್ಷಮಯಾಧರಿತ್ರಿ' ಎಂದೂ ಕರೆಯುತ್ತಾರೆ. ಆಕೆಯ ಜೀವನವು ಗಂಧದ ಕೊರಡಿನಂತೆ. ತಾನು ತೇಯ್ದು ಇತರರಿಗೆ ಸುಖವನ್ನು ನೀಡುತ್ತಾಳೆ. ಆಕೆ 'ದೀಪ'ದಂತೆ. ಬತ್ತಿ ತಾನು ಉರಿದು ಬೆಳಕು ನೀಡುವಂತೆ ಸಂಸಾರದ ರಥವನ್ನು ಸುರಳಿತವಾಗಿ ನಡೆಸಿಕೊಂಡು ಮನೆಯ ಒಳಗೂ, ಹೊರಗೂ ದುಡಿಯುತ್ತಾಳೆ. 'ಅಡು ಮುಟ್ಟದ ಸೊಪ್ಪಿಲ್ಲ

[6ನೇ ಪುಟ ನೋಡಿ]

ಸ್ತ್ರೀಯರಿಗೆ ವಿದ್ಯಾಭ್ಯಾಸದ ಪ್ರಾಮುಖ್ಯತೆ

ಬೈನೆರವನ ಇಂದ್ರಕುಮಾರ್, ಮೈಸೂರು.

ಸಮಾಜ ಸುಧಾರಣೆಯಲ್ಲಿ ಹೆಣ್ಣಿನ ಸ್ಥಾನ ಪ್ರಮುಖವಾದದು. ಸಮಾಜ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಬೇಕಾದರೆ ಆಕೆ ಬಹಳಷ್ಟು ಅಡಚಣೆಗಳನ್ನು ಎದುರಿಸಬೇಕಾಗಿದೆ. ಕಾರಣ 'ವಿದ್ಯೆ' ಎಂಬ ಸಾರಥಿಯು ತೊಡಕಾಗಿದೆ.

'ವಿದ್ಯೆ ಎಂದರೆ ವೈಯಕ್ತಿಕವಾಗಿ ಅಭಿವೃದ್ಧಿ ಎಂದರ್ಥವಾಗಬಹುದು. ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಅಭಿವೃದ್ಧಿಯೂ ಸಹವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಪ್ರಪಂಚದಲ್ಲಿ ಯಾವುದೇ ಒಂದು ದೇಶ ನಿರ್ಭಯವಾಗಿ ಅಭಿವೃದ್ಧಿ ಪಥದಲ್ಲಿ ನಡೆಯಬೇಕಾದರೆ ಅಲ್ಲಿ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ಅಲ್ಲದೆ ಸರ್ವ ರೀತಿಯಲ್ಲಿ ಮಹಿಳೆಯರ ಅಭಿವೃದ್ಧಿಯಾಗಬೇಕು, ಇಲ್ಲದಿದ್ದಲ್ಲಿ ಸಾಧ್ಯವಿಲ್ಲವೆಂದು ಹೇಳಬಹುದು. ಅದೇ ರೀತಿ ಸಮಾಜದ ಅಭಿವೃದ್ಧಿಗೂ ಮಹಿಳೆಯ ಶ್ರಮ ಸಕ್ರಿಯವಾಗಬೇಕಾಗುತ್ತದೆ. 'ಹೆಣ್ಣು ಸಮಾಜದ ಬೆನ್ನೆಲುಬು' ಯಾಕೆಂದರೆ ಆಕೆ ಜೀವ [ಜನನ] ಕೊಡುತ್ತಾಳೆ. ಅಂದರೆ ಸಮಾಜವೆಂಬ ಕಟ್ಟಡಕ್ಕೆ ಆಧಾರಸ್ಥಂಭಗಳ ನಿರ್ಮಾಪಕಳಾಗಿರುತ್ತಾಳೆ.

ಪ್ರಪಂಚ [ಸಮಾಜ]ವೂ ಪುರುಷನಿಗೆ ಪ್ರಾಧಾನ್ಯತೆಯನ್ನು ಕೊಟ್ಟಿರುವುದರಿಂದ ಹೆಣ್ಣಿಗೆ ತನ್ನ ಪ್ರತಿಭೆಗಳನ್ನು ಬಾಹ್ಯವಾಗಿ ಪ್ರದರ್ಶಿಸಲು ಅವಕಾಶ ಸಿಗುತ್ತಿಲ್ಲ. ಆಕೆ 'ಲಿಂಗ' ಭೇದಕ್ಕೆ ಕಾರಣವಾಗಿ ಅನಕ್ಷರತೆಗೆ ಒಳಗಾಗಿದ್ದಾಳೆ. ಆದ್ದರಿಂದ ಆಕೆ ನಾಲ್ಕು ಗೋಡೆಗಳ ಮಧ್ಯೆ ತನ್ನ ಜನನ–ಮರಣದ ಅಂತರದ ಜೀವನವನ್ನು ಸಾಗಿಸಿ ತೃಪ್ತಿಪಡಬೇಕಾಗಿದೆ. ಅವಳ ಕೆಲಸ ಕೇವಲ ಗಂಡ, ಅತ್ತೆ–ಮಾವಂದಿರ ಸೇವೆ ಮತ್ತು ಮಕ್ಕಳನ್ನು ಹಡೆಯುವುದಕ್ಕೆ ಸೀಮಿತವಾಗಿದೆ. ಅಲ್ಲದೆ ವರದಕ್ಷಿಣೆಯಂತಹ ಮತ್ತು ಪೀಡೆಯ ತೊಂದರೆಗೆ ಸಿಲುಕಿ ಬೆಂಕಿ, ವಿಷ ನೇಣು, ಕೆರೆ, ಬಾವಿಗಳಿಗೆ ತನ್ನ ಪ್ರಾಣವನ್ನು ಅನಾಯಕವಾಗಿ ಅರ್ಪಿಸಿಕೊಳ್ಳುತ್ತಿರುವ ವಿಷಯವನ್ನು ನಾವು ಪ್ರತಿನಿತ್ಯ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಇದಕ್ಕೆಲ್ಲ ಆಕೆಯ ಅಜ್ಞಾನವೇ ಕಾರಣ.

ಆದುದರಿಂದ ಈ ನಿಟ್ಟಿನಲ್ಲಿ ಹೆಣ್ಣಿಗೆ ವಿದ್ಯೆ ಒಂದು ಅಸ್ತ್ರವಾಗಬೇಕಿದೆ. ಆ ಅಸ್ತ್ರದ ಅಭ್ಯಾಸದಿಂದ ಆಕೆ ಸಮಾಜದಲ್ಲಿ ತನ್ನ ಸಮಾನತೆಯ ಸ್ಥಾನವನ್ನು ಪ್ರಾಮಾಣೀಕರಿಸಬಹುದು. ಸಮಾಜಘಾತುಕ ಪೀಡೆಯಾದ ವರದಕ್ಷಿಣೆಯನ್ನು ಧಿಕ್ಕರಿಸಿ ತನ್ನದೇ ಆದ ತಟಸ್ಥ ಧೋರಣೆಯನ್ನು ತಳೆಯಬಹುದಲ್ಲವೆ. ಬಾಹ್ಯ ಪ್ರಪಂಚದಲ್ಲಿ ತನ್ನ ಹಕ್ಕು ಮತ್ತು ರಕ್ಷಣೆಗಾಗಿ ನ್ಯಾಯಯುತವಾಗಿ ಧ್ವನಿಯೆತ್ತಿ ಪ್ರತಿಪಾದಿಸಬೇಕಾದರೆ ಹೆಣ್ಣಿಗೆ ವಿದ್ಯಾಭ್ಯಾಸದ ಅಗತ್ಯವಿದೆ. ಒಂದು ಹೆಣ್ಣು ವಿದ್ಯಾವಂತೆಯಾದರೆ ಆ ಕುಟುಂಬವೇ ವಿದ್ಯಾವಂತ ಕುಟುಂಬವಾಗುವುದರಲ್ಲಿ ಸಂಶಯವಿಲ್ಲ. ಓರ್ವ ವಿದ್ಯಾವಂತೆ ತಾಯಿ ಕುಟುಂಬದ ಒಂದು ಉಪಯುಕ್ತ ವ್ಯಕ್ತಿಯಾಗಿರುತ್ತಾಳೆ. ಯಾಕೆಂದರೆ ತಾನು ಚಿಕ್ಕ ಸಂಸಾರದ ಯೋಜಕಳಾಗುತ್ತಾಳೆ. ತನ್ನ ಮಕ್ಕಳಿಗೆ ಉತ್ತಮ ವಿದ್ಯೆ ಮತ್ತು ಭವಿಷ್ಯದ ಮಾರ್ಗದರ್ಶಿಯಾಗಿ ದೇಶಕ್ಕೆ ಒಳ್ಳೆಯ ಸಾಮರ್ಥ್ಯದ ಪೌರರನ್ನಾಗಿ ರೂಪಿಸುತ್ತಾಳೆ.

ಹೆಣ್ಣು ಇತ್ತೀಚಿನ ದಿನಗಳಲ್ಲಿ ಪರಿವರ್ತನೆಯಾಗುತ್ತಿದ್ದಾಳೆ. ಗಂಡಿಗೆ ಸಮಾನಳಾಗಿ ಆಡಳಿತ ವಿಜ್ಞಾನ–ತಂತ್ರಜ್ಞಾನಗಳಲ್ಲಿ ಮಾದರಿಯಾಗುತ್ತಿದ್ದಾಳೆ. ಇಂದು ಪಂಜರದಲ್ಲಿನ ಗಿಳಿಯು ಬಿಡಿಸಿಕೊಂಡು ಹೊರಪರಿಸರದಲ್ಲಿ ರೆಕ್ಕೆಬಿಚ್ಚಿ ಹಾರಾಡುತ್ತಿರುವಂತಾಗಿದ್ದಾಳೆಂದರೆ ತಪ್ಪಾಗಲಾರದು. ನ್ಯಾಯಯುತವಾಗಿ ತನಗಿರುವ ಹಕ್ಕು ಮತ್ತು ಮುಂದಾಳತ್ವವನ್ನು ಗಟ್ಟಿಸಿಕೊಳ್ಳುತ್ತಿದ್ದಾಳೆ. ಪ್ರಪಂಚವೇ ಈಗ ಆಕೆಯ ಮುಂದಾಳತ್ವವನ್ನು ಎದುರುನೋಡುವಂತಾಗಿದೆ. ಇದಕ್ಕೆಲ್ಲಾ ಆಕೆಯ ವಿದ್ಯಾಭ್ಯಾಸದ ಅಭಿವೃದ್ಧಿಯೇ ಕಾರಣ.

ಆದ್ದರಿಂದ ಹೆಣ್ಣು ಸಮಾಜದಲ್ಲಿ ತನ್ನ ಸ್ಥಾನಮಾನವನ್ನು ರೂಪಿಸಿಕೊಳ್ಳುವಲ್ಲಿ ಪ್ರತಿಯೊಬ್ಬ ಮಹಿಳೆಯು ತನ್ನನ್ನು ತಾನೆ ತೊಡಗಿಸಿಕೊಳ್ಳಬೇಕು. ಆಗ ಮಾತ್ರವೇ ಮಹಿಳೆಯರ ಅಭಿವೃದ್ಧಿ ಜೊತೆಗೆ ಸಮಸ್ತ ಸಮಾಜದ ಅಭಿವೃದ್ಧಿಯು ಸಾಧ್ಯ. ○

ಹೆಣ್ಣು ಸಮಾಜದ ಕಣ್ಣು

[5ನೇ ಪುಟದಿಂದ ಮುಂದುವರೆದುದು]

ಸ್ತ್ರೀ ಕಾಲಿಡದ ಕ್ಷೇತ್ರವಿಲ್ಲ' ಎಂಬಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಆಕೆ ಮಹತ್ತರ ಸಾಧನೆಗೈಯ್ದು ದೇಶದ/ಸಮಾಜದ ಅಮೂಲ್ಯ ಆಸ್ತಿಯಾಗಿದ್ದಾಳೆ. ಸಮಾಜದ ಕಣ್ಣಾಗಿ, ಹೆಣ್ಣಾಗಿ ಸಮಾಜಕ್ಕೆ ಉತ್ತಮ ಪ್ರಜೆಯನ್ನು ನೀಡುವಲ್ಲಿ ಸಹಕಾರಿಯಾಗಿದ್ದಾಳೆ. ತನ್ನದೇ ಆದ ಸ್ಥಾನಮಾನವನ್ನು ಗಳಿಸುವಲ್ಲಿ ಅವಳು ಇನ್ನೂ ಹೋರಾಡುತ್ತಿದ್ದಾಳೆ, ಶ್ರಮಿಸುತ್ತಿದ್ದಾಳೆ, ಛಲಗಾತಿಯಾಗಿದ್ದಾಳೆ, ದಿಗ್ವಿಜಯ ಸಾಧಿಸಲು ಹೊರಟಿದ್ದಾಳೆ. ಆಕೆಯ ಸಾಧನೆಗೆ ತುಂಬು ಮನಸ್ಸಿನಿಂದ ಸಹಕಾರ ನೀಡಿ ಹಾರೈಸುವುದು ಪ್ರತಿಯೊಬ್ಬರ ಕರ್ತವ್ಯವೂ ಆಗಿದೆ. ○

ಆರೋಗ್ಯ ಚಿಂತನ : ನೆಗಡಿ

'ಮೂಗಿದ್ದವನಿಗೆ ನೆಗಡಿ ತಪ್ಪಿದ್ದಲ್ಲ' ಎಂಬಂತೆ ಈ ರೋಗದಿಂದ ಬಳಲದವರಿಲ್ಲ.

ನೆಗಡಿ ಮತ್ತು ಫ್ಲೂ ಇವು ವೈರಸ್ ಸೋಂಕಿನಿಂದ ಬರುವ ರೋಗವಾಗಿದೆ. ಕೆಲವೊಮ್ಮೆ ಅಲರ್ಜಿಯಿಂದ ಸಹ ನೆಗಡಿ ಆಗಾಗ ಬರುತ್ತಿರಬಹುದು. ನೆಗಡಿ ಆದವರು ಸೀನಿದಾಗ, ಕೆಮ್ಮಿದಾಗ ರೋಗಾಣುಗಳು ಗಾಳಿಯಲ್ಲಿ ಸೇರಿ ಬೇರೆಯವರಿಗೆ ಸುಲಭವಾಗಿ ಸೋಂಕು ಹರಡುತ್ತದೆ.

ಹೆಚ್ಚಿನ ಸಂಧರ್ಭಗಳಲ್ಲಿ ಯಾವುದೇ ಔಷಧದ ಸಹಾಯವಿಲ್ಲದೆ ನೆಗಡಿ ಒಂದು ವಾರದ ಒಳಗೆ ವಾಸಿಯಾಗುತ್ತದೆ. ಆದರೆ ಕೆಲವೊಮ್ಮೆ ಮೂಗು ಕಟ್ಟಿಕೊಳ್ಳುವುದರಿಂದ ತಲೆ ಸಿಡಿತ [ಸೈನುಸೈಟಸ್] ಕಿವಿ ನೋವು ಕಾಣಿಸಿಕೊಳ್ಳಬಹುದು. ಕೆಲವೊಮ್ಮೆ ಬ್ಯಾಕ್ಟೀರಿಯಾಗಳು ಸೋಂಕಿ ನ್ಯೂಮೋನಿಯ, ಕಿವಿಸೋರುವಿಕೆ ಇತ್ಯಾದಿ ಆಗಬಹುದು.

ನೆಗಡಿಗೆ ರಾಮಬಾಣ ಎಂದು ಹೇಳಿಕೊಳ್ಳುವಂತಹ ಹಲವಾರು ದುಬಾರಿಯಾದ ಔಷಧಗಳು ಇಂದು ಮಾರ್ಕೆಟನಲ್ಲಿವೆ. ಆದರೆ ಸರಳವಾದ ಆಸ್ಪಿರಿನ್ ಅಥವಾ ಕ್ಲೋರೊಸಿನ್ ಹಾಗೂ ಆಂಟಿಹಿಸ್ಟೆಮಿನಿಕ್ ಔಷಧಗಳು ಸಾಕು. ಸಾಮಾನ್ಯ ನೆಗಡಿಗೆ ಜಾಸ್ತಿ ಔಷಧ ಸೇವಿಸುವಿಕೆ ಅನವಶ್ಯಕ. ನೆಗಡಿಗೆ ಕಾರಣವಾಗಿರುವ ವೈರಸನ್ನು ನಾಶಪಡಿಸಲು ಯಾವುದೇ ಔಷಧವಿಲ್ಲ. ರೋಗ ಲಕ್ಷಣಗಳನ್ನು ಕಡಿಮೆ ಮಾಡಲು ಔಷಧವನ್ನು ಉಪಯೋಗಿಸಬೇಕಷ್ಟೆ. ಮೂಗು ಕಟ್ಟಿಕೊಂಡಲ್ಲಿ ಮೂಗಿನೊಳಗೆ ಫಿನೈಲ್‌ಪ್ರಿನ್ [Phenyle-prine] ಮೂಗು ಹನಿಯನ್ನು ಉಪಯೋಗಿಸಬಹುದು.

ನೆಗಡಿ ಇರುವವರು ವಿಶೇಷ ಪಥ್ಯ ಮಾಡಬೇಕಾಗಿಲ್ಲ. ತಣ್ಣೀರನ್ನು ಕುಡಿಯಬಾರದು. ನೆಗಡಿಗೆ ಉತ್ತಮ ಔಷಧಿ ಎಂದರೆ ಚೆನ್ನಾಗಿ ಪೌಷ್ಠಿಕವಾದ ಆಹಾರ ತಿನ್ನುವುದು ಮತ್ತು ಸಾಕಷ್ಟು ವಿಶ್ರಾಂತಿ. ಟೊಮೊಟೊ, ಕಿತ್ತಳೆರಸ, ನಿಂಬೇರಸ ಇತ್ಯಾದಿ ವಿಟಮಿನ್ 'ಸಿ' ಇರುವ ಹಣ್ಣುಗಳು ಉತ್ತಮ. ನೆಗಡಿಯ ಜೊತೆಗೆ ಗಂಟಲು ಕೆರೆತ ಸಾಮಾನ್ಯ. ಇದಕ್ಕೆ ಬಿಸಿನೀರಿನಲ್ಲಿ ಉಪ್ಪು ಹಾಕಿ ಬಾಯಿ ಮುಕ್ಕುಳಿಸಬೇಕು. ಬಿಸಿನೀರಿನ ಆವಿಯನ್ನು ಸೇವಿಸಬೇಕು. ಬಿಸಿನೀರಿಗೆ ಸ್ವಲ್ಪ ವಿಕ್ಸ್ ಹಾಕಿ ಸೇದಿಕೊಳ್ಳಬಹುದು. ಇದರಿಂದ ಕಟ್ಟಿದ ಮೂಗು ಸಡಿಲವಾಗುತ್ತದೆ.

ನೆಗಡಿಯೊಂದಿಗೆ ಜ್ವರ, ಕೆಮ್ಮು ಅಥವಾ ಇನ್ನಿತರ ತೊಂದರೆಗಳು ಇದ್ದಲಿ ಹಾಗೂ ನೆಗಡಿ ಒಂದು ವಾರಕ್ಕಿಂತ ಜಾಸ್ತಿ ಇದ್ದಲ್ಲಿ ವೈದ್ಯರನ್ನು ಕಂಡು ಅವರ ಸಲಹೆಯನ್ನು ಪಡೆದುಕೊಳ್ಳಬೇಕು.

ಡಾ॥ ಎನ್. ಎಸ್. ಪ್ರವೀಣ [ಎಂ.ಡಿ]
ಮಡಿ

ನನ್ನ ನಲ್ಲ

ಮುತ್ತಿನ ಹಾರ ಕೊಡುವುದಾಗಿ ಹೇಳಿ
ಮುತ್ತು ಕೊಟ್ಟು ಹೋದ
ಓ ನನ್ನ ನಲ್ಲ.

ಚಂದಾದಾರರಲ್ಲಿ ವಿನಂತಿ

ನೀವು ಕಳಿಸಬೇಕಾದ ಚಂದಾ ಹಣವು ಮನಿ ಆರ್ಡರ್‌ನ ಮುಖಾಂತರ ಅಥವಾ ಡಿ. ಡಿ. ಮುಖಾಂತರವಾಗಿರಲಿ. ಸ್ಥಳೀಯ ಚೆಕ್‌ಗಳನ್ನು ಮಾತ್ರ ಸ್ವೀಕರಿಸಲಾಗುವುದು. ದಯವಿಟ್ಟು ಚಂದದಾರರು ಸಹಕರಿಸಬೇಕಾಗಿ ವಿನಂತಿ.

ಚಂದಾ ವಿವರ	ವಾರ್ಷಿಕ	120/-
	ಅರ್ಧ ವಾರ್ಷಿಕ	60/-
ಜಾಹೀರಾತು	ಒಳ ಪುಟಕ್ಕೆ	1000/-
	ಕೊನೆ ಹೊರಪುಟಕ್ಕೆ	1500/-
	ಅರ್ಧ ಪುಟಕ್ಕೆ	500-
	ಕಾಲು ಪುಟಕ್ಕೆ	250/-

–ಸಂಪಾದಕಿ

ದಿ|| ನಿಡ್ಯಮಲೆ ಬೆಳ್ಯಪ್ಪನವರು

[ಗೌಡಕೇಸರಿ ದಿ|| ನಿಡ್ಯಮಲೆ ಮುದ್ದಪ್ಪನವರ ಹಿರಿಯ ಸಹೋದರ]

ಪಾರುಪತ್ತೇದಾರರಾಗಿದ್ದ ನಿಡ್ಯಮಲೆ ರಾಮಪ್ಪ ಹಾಗೂ ತಂಗಮ್ಮ ದಂಪತಿಗಳ ಪ್ರಥಮ ಪುತ್ರರಾಗಿ ಬೆಳ್ಯಪ್ಪನವರು ಜನಿಸಿದರು. 1885ನೇ ಇಸವಿಯಲ್ಲಿ ಜನಿಸಿದ ಶ್ರೀಯುತರು ತಮ್ಮ ಮೆಟ್ರಿಕ್ ವಿದ್ಯಾಭ್ಯಾಸವನ್ನು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಪಡೆದರು.

ಆಗ ಕೊಡಗು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು. ಪ್ರತಿಭಾವಂತರಾದ ಇವರಿಗೆ ಮಡಿಕೇರಿಯ ಚೀಫ್ ಕಮಿಷನರ್ ಆಫೀಸಿನಲ್ಲಿ ಹೆಡ್‌ಮುನ್ಸಿ ಉದ್ಯೋಗ ದೊರಕಿತು. ಬಹುಶಃ ಆಗಿನ ಕಾಲದಲ್ಲಿ ಇವರಿಗೆ ದೊರಕಿದ ಹುದ್ದೆ ಗೌಡರಲ್ಲಿ ದೊಡ್ಡ ಹುದ್ದೆ ಆಗಿತ್ತು. 1912ನೇ ಇಸವಿಯಲ್ಲಿ ಅಡ್ಪಂಗಾಯ ಮನೆ

ಲೇಖಕ : ಡಾ|| ಜಯದೀಪ್, ಬಿ.ಡಿ.ಎಸ್

ತನದ ತಂದೆಗೋರ್ವಳೇ ಮಗಳಾದ ಚಿನ್ನಮ್ಮನವರನ್ನು ವಿವಾಹವಾದರು. ಶ್ರೀಯುತರು ಉದ್ಯೋಗ ನಿರತರಾಗಿ ಮಡಿಕೇರಿಯಲ್ಲಿದ್ದರು. ಇವರ ತಾಯಿ ಮತ್ತು ಪತ್ನಿ ಹಾಗೂ ಕುಟುಂಬದವರು ಪೆರಾಜೆಯ ಕಾಫಿತೋಟ ಎಂಬಲ್ಲೇ ವಾಸವಿದ್ದರು. ಕೊನೆ ತಮ್ಮ ಸೋಮಣ್ಣನವರನ್ನು ಮಡಿಕೇರಿಯಲ್ಲಿ ಕಾನ್ವೆಂಟಿಗೆ ಸೇರಿಸಿದ್ದರು. ಮಧ್ಯದ ಸಹೋದರ ಮುದ್ದಪ್ಪ ಪೆರಾಜೆಯಲ್ಲೇ ಇದ್ದು ಕೃಷಿ ಕಾರ್ಯದಲ್ಲಿ ಹಿರಿಯರಿಗೆ ಸಹಾಯವಾಗಿ ದುಡಿಯುತ್ತಿದ್ದರು. ಆರ್ಥಿಕ ಪರಿಸ್ಥಿತಿಯ ಅಸಹಾಯಕತೆಯಿಂದಾಗಿ ಇಬ್ಬರು ಸಹೋದರರನ್ನೂ ಓದಿಸಿಕೊಂಡು ಕುಟುಂಬ ಪೋಷಣೆ ಕಷ್ಟವಾಗಬಹುದೆಂದು ಹೀಗೆ ನಿರ್ಧಾರಕ್ಕೆ ಬಂದಿದ್ದರು. ಶ್ರೀಯುತರ ತಾಯಿ ತಂಗಮ್ಮನವರೊಮ್ಮೆ ಮುದ್ದಪ್ಪನವರನ್ನು ಯಾವುದೋ ಕಾರಣಕ್ಕೆ ಗದರಿಸಿದಾಗ ಮುದ್ದಪ್ಪನವರು ದೂರ ಹೋಗಿ ನಿಂತು "ನಾನು ಇನ್ನೂ ದೂರ ಬಹುದೂರ ಹೋಗುತ್ತೇನೆ ಎಂದರಂತೆ. ಒಮ್ಮೊಮ್ಮೆ ತಾನು ಎಲ್ಲಿಯಾದರೂ ಕಾಫಿ ತೋಟದಲ್ಲಿ ಕೆಲಸಕ್ಕೆ ನಿಂತಾದರೂ ಓದುತ್ತೇನೆ ಎನ್ನುತ್ತಿದ್ದರಂತೆ. ಈ ಘಟನೆಗಳಿಂದ ಮುದ್ದಪ್ಪನವರ ವಿದ್ಯಾರ್ಜನೆಯ ಮಹತ್ವಾಕಾಂಕ್ಷೆಯನ್ನು ಮನಗಂಡ ಅಣ್ಣ ಬೆಳ್ಯಪ್ಪನವರು, ನಿನ್ನನ್ನು ನಾನು ಮಡಿಕೇರಿಗೆ ಕರೆದುಕೊಂಡು ಹೋಗಿ ಶಾಲೆಗೆ ಸೇರಿಸುತ್ತೇನೆ ಎಂದು ಚಿತ್ತಶಾಂತಿ ನೀಡಿ ಕರೆದುಕೊಂಡು ಹೋಗಿ 4ನೇ ತರತಿಗಗೆ ಅವರನ್ನು ಕಾನ್ವೆಂಟಿಗೆ ಸೇರಿಸಿದರು, ತಮ್ಮಂದಿರ ಯಶಸ್ಸಿನ ದಾರಿಯ ಮೆಟ್ಟಲಾಗಿ ನಿಂತರು ಬೆಳ್ಯಪ್ಪನವರು. ಗಂಧ ತಾನು ತೇದು ಇತರರಿಗೆ ಸುವಾಸನೆ ನೀಡುವಂತೆ, ತಾನು ಎಷ್ಟೇ ಆರ್ಥಿಕವಾಗಿ ಕಷ್ಟದಲ್ಲಿದ್ದರೂ ತಮ್ಮಂದಿರಿಗೆ ತಮ್ಮ ಕಷ್ಟದ ಅರಿವು ಬಾರದಂತೆ ನೋಡಿಕೊಂಡರು. ಶ್ರೀಯುತರ ಪತ್ನಿ ಚಿನ್ನಮ್ಮನವರಂತೂ ತುಂಬಾ ಸದ್ಗುಣಿ, ಬಂಧು ಪ್ರೇಮ, ಧರ್ಮನಿಷ್ಠೆ ಇವೆಲ್ಲ ಗುಣಗಳು ಅವರಲ್ಲಿ ಸ್ವಾಭಾವಿಕವಾಗಿ ಮೈಗೂಡಿತ್ತು. ಪೆರಾಜೆ ಗ್ರಾಮಕ್ಕೆ ಯಾವ ಅಧಿಕಾರ ವರ್ಗದವರು ಬಂದರೂ ಅವರಿಗೆ ಆದರಾತಿಥ್ಯ ನೀಡುತ್ತಿದ್ದರು, ಅಲ್ಲದೆ ತುಂಬಾ ಸಮರ್ಥ ಹೆಣ್ಣೂ ಕೂಡ. ಪತಿಯ ಜೀವನದಲ್ಲಿ ಆರ್ಥಿಕ ಮುನ್ನಡೆ ಮತ್ತು ಸಾಮಾಜಿಕ ಮುನ್ನಡೆಯಲ್ಲಿ ಅರ್ಧಾಂಗಿ ಮಾತ್ರವಲ್ಲದೆ ಅರ್ಧಾಂಗವಾಗಿ ದುಡಿದವರು. ಪೆರಾಜೆ ಆಸ್ತಿಯಲ್ಲಿನ ಕೃಷಿಕಾರ್ಯ ನೋಡಿಕೊಂಡು ತನ್ನ ಕುಟುಂಬ ಪೋಷಣೆಯ ಬೆನ್ನೆಲುಬಾಗಿ ದುಡಿದರು. ಮೈದುನಂದಿರ ವಿದ್ಯಾಭ್ಯಾಸದ ಖರ್ಚಿಗೆಂದು ತನ್ನ ತವರು ಮನೆಯಿಂದ ತಂದ ಚಿನ್ನವನ್ನೂ ನೀಡಿದ ತ್ಯಾಗಿ, ಹೆಸರಿಗೆ ತಕ್ಕಂತೆ ಅಪ್ಪಟ ಚಿನ್ನವೇ ಆಗಿದ್ದರು. ಕುಟುಂಬದ ಸದಸ್ಯರ ಯಶಸ್ಸಿನ ಹಿಂದೆ ಎಲೆಮರೆಯ ಕಾಯಿಯಂತೆ ಬದುಕಿ ಬಾಳಿದರು.

ಬೆಳ್ಯಪ್ಪನವರು ಮಡಿಕೇರಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಈ ಸಮಯದಲ್ಲಿ ಕೊಡಗಿನಲ್ಲಿ ಗೌಡರ ಬದುಕು ತುಂಬಾ ಕಷ್ಟಸಾಧ್ಯವಾಗಿತ್ತು. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಬಹಳ ಶ್ರಮಪಡಬೇಕಾಗಿದ್ದಿತು. ಇವರು ಹೆಡ್‌ಮುನ್ಸಿ ಅಂದರೆ ಆಫೀಸ್ ಸೂಪರಿಡೆಂಟ್ ಆಗಿರುವಾಗ ಅನೇಕ ಜನರಿಗೆ ಉದ್ಯೋಗಾವಕಾಶಗಳನ್ನು ಮಾಡಿಕೊಟ್ಟು ಹಲವರ ಬದುಕಿನ ದಾರಿದೀಪವಾದರು. ತನ್ನ ಮನೆಯಲ್ಲಿಯೂ ವಿದ್ಯಾರ್ಜನೆ ಮಾಡುವ ಮಕ್ಕಳಿಗೆ ವಸತಿ, ಆಹಾರದ ವ್ಯವಸ್ಥೆ ನೀಡಿ ಪೋಷಿಸುತ್ತಿದ್ದರು. ಉದಾಹರಣೆಗೆ : ಅಡ್ಪಂಗಾಯ ಶಾಂತಪ್ಪನವರು ಮಂದ್ರಿರ ಕಾರ್ಯಪ್ಪನವರೂ ಇವರ ಮನೆಯಲ್ಲಿದ್ದು ವಿದ್ಯಾರ್ಜನೆ ಮಾಡಿದರು. ಕೊಡಗಿನಲ್ಲಿ ಗ್ರಾಮಾಭಿವೃದ್ಧಿ ಕಾರ್ಯಗಳಲ್ಲೂ ಶ್ರೀಯುತರು ದುಡಿದು ಏಳಿಗೆಯತ್ತ ಮುನ್ನಡೆದರು. ಆಂಗ್ಲ ಭಾಷೆ ಅರಿಯದೆ ತಮ್ಮ ತಂದೆ ರಾಮಪ್ಪನವರು ಕೊಡಗಿನಲ್ಲಿ ಪಾರುಪತ್ತೇದಾರಿಕೆ ಕೆಲಸ ಬಿಟ್ಟಂತಹ ನೆನಪಿನ ಛಲದಿಂದಲೋ ಎಂಬಂತೆ ಇಂಗ್ಲೀಷ್ ಆಫೀಸಿನಲ್ಲೇ ಮುಖ್ಯ ಹುದ್ದೆಯಲ್ಲಿದ್ದ ಮೊದಲ ಶ್ರೇಯಸ್ಸು ಶ್ರೀಮಾನ್ ಬೆಳ್ಯಪ್ಪನವರದ್ದು. ತಮ್ಮ ಕಾರ್ಯಕ್ಷೇತ್ರದಲ್ಲಿ ತುಂಬಾ ಗೌರವಾನ್ವಿತರಾಗಿ ಬದುಕಿದವರು ಆಂಗ್ಲರ ಸಮೀಪವರ್ತಿಗಳಾಗಿದ್ದುಕೊಂಡು, ಗೌಡ ಜನತೆಗೆ ಸಹಾಯ ಮಾಡಿದ ಮೊದಲ ವ್ಯಕ್ತಿ ಎಂದರೆ ಅತಿಶಯೋಕ್ತಿಯಾಗಲಾರದು. ಕೇವಲ 50-60 ವರ್ಷಗಳ ಹಿಂದೆ ನಮ್ಮವರು ಬದುಕಿ ಬಾಳಲು ಪಡುತ್ತಿದ್ದ ಬವಣೆಗಳ ಕುರಿತ್ತು

ಯೋಚಿಸುವಾಗ ಹೀಗೂ ಇತ್ತೇ ಎಂದು ಈಗಿನವರು ಅಚ್ಚರಿ ಪಡುವಂತಾಗಿದೆ ಪೆರಾಜೆಯಿಂದ ಮಡಿಕೇರಿಗೆ ನಡೆದೇ ಹೋಗುತ್ತಿದ್ದ ಕಾಲವದು. ಒಂದು ರೂಪಾಯಿಗೆ 25 ಸೇರು ಅಕ್ಕಿ ದೊರಕುತ್ತಿದ್ದ ಆ ಕಾಲದಲ್ಲಿ ಶ್ರೀಯುತರಿಗೆ ಆಂಗ್ಲ ಕಛೇರಿಯ ಸಂಬಳ 100 ರೂ.ಗಳಂತೆ. ಆಂಗ್ಲರ ಆಳ್ವಿಕೆಯಲ್ಲೂ ನೆರೆ ಪ್ರವಾಹದಿಂದ ಕೃಷಿ ನಾಶವಾದರೆ ದೊರೆಗಳೇ ಸ್ವತಹಃ ನೋಡಿ ಪರಿಹಾರ ನೀಡುತ್ತಿದ್ದರಂತೆ. ಹೀಗೊಮ್ಮೆ ಪೆರಾಜೆ ಕಾಫಿ ತೋಟದಲ್ಲಿ ಹೊಸದಾಗಿ ಮಾಡಿದ ಅಡಿಕೆ ತೋಟಕ್ಕೆ ಹಾನಿ ಬಂದಾಗ ಸ್ವತಃ ಆಗಮಿಸಿ ಸ್ವಲ್ಪ ಹೆಚ್ಚಿನ ಪರಿಹಾರವನ್ನೇ ಕೊಡಿಸಿದರಂತೆ. ಆ ಹಣದಲ್ಲಿ ತೋಟವನ್ನು ಸರಿಪಡಿಸಿ, ಉಳಿದ ಹಣದಲ್ಲಿ ಅಲ್ಲಿಯೇ ಒಂದು ಮನೆ ಕಟ್ಟಲು ಪ್ರಾರಂಭಿಸಿದರಂತೆ. ಈ ದಂಪತಿಗಳಿಗೆ ಕ್ರಮವಾಗಿ ಶ್ರೀ ಸುಬ್ಬಯ್ಯ ಶ್ರೀ ರಾಮಪ್ಪ ಮತ್ತು ಶ್ರೀ ಎಸ್. ಬಿ. ಅನಂತರವರು ಜನಿಸಿದರು. ಇವರಲ್ಲಿ ಶ್ರೀ ಎಸ್. ಬಿ. ಅನಂತರವರು ವಿದ್ಯಾಭ್ಯಾಸದಲ್ಲಿ ಮುನ್ನಡೆಯನ್ನು ಸಾಧಿಸಿದ್ದು ಮದರಾಸಿನ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿಯನ್ನು ಪಡೆದು ಮಡಿಕೇರಿಯಲ್ಲಿ ವಕೀಲ ವೃತ್ತಿಯನ್ನು ಕೈಗೆತ್ತಿಕೊಂಡು, ತನ್ನ ಹುಟ್ಟೂರಾದ ಪೆರಾಜೆ ಗ್ರಾಮದ ಅಭಿವೃದ್ಧಿಗೆ ಬಹಳಷ್ಟು ಶ್ರಮಿಸಿದರು. ಇವರುಗಳು ಕ್ರಮವಾಗಿ ಮುರುಳ್ಯ ಲಿಂಗಪ್ಪಗೌಡರ ಪತ್ನಿ ಸೀತಮ್ಮನವರೂ, ಮಂದ್ರಿಮನೆ ಕಾರ್ಯಪ್ಪನವರ ಪತ್ನಿ ಶಿವಮ್ಮನವರೂ ಕೆದಂಬಾಡಿ ತಿಮ್ಮಯ್ಯನವರ ಪತ್ನಿ ಸುಶೀಲನವರೂ, ಅಡತ್ತಲೆ ಹೂವಯ್ಯನವರ ಪತ್ನಿ ರಾಧಮ್ಮನವರೂ, ಕುರುಂಜಿ ವಿಶ್ವನಾಥ ಗೌಡರ ಪತ್ನಿ ಸಾವಿತ್ರಿಯವರೂ ಮತ್ತು ಕೊನೆಯ ಪುತ್ರಿ ಶ್ರೀಮತಿ ಪುಷ್ಪಾವತಿಯರು.

ಹಿಂದಿನ ಹಿರಿಯರು ವಿದ್ಯಾರ್ಜನೆಗಾಗಿ ಪಿಂಡಿಕ್ಯಾ ಬತ್ತಿಯ ಬೆಳಕಿನಲ್ಲೂ, ಬೀದಿ ದೀಪದ ಕೆಳಗೆ ಕೂತು, ಓದಿ ಜ್ಞಾನ ಸಂಪನ್ನತೆಯನ್ನು ಪಡೆದರು. ತನ್ಮೂಲಕ ತಮ್ಮ ಕುಟುಂಬವನ್ನೂ, ಸಮಾಜವನ್ನೂ ಪ್ರಗತಿಯ ಹಾದಿಯತ್ತ ಕೊಂಡೊಯ್ದರು ನಮ್ಮ ಸಮಾಜದಲ್ಲಿ ಶುಭ ಸಮಾರಂಭ ಸಂದರ್ಭಗಳಲ್ಲಿ ಕಾರಣಿಕರಿಗೆ ಇಟ್ಟು ಮೃತ ಹಿರಿಯರಿಗೆ ಗೌರವದಿಂದ ಕೃತಜ್ಞತೆ ಸಲ್ಲಿಸಿ ಪ್ರಾರ್ಥಿಸಿಕೊಳ್ಳುವ ಕ್ರಮವಿದೆಯಲ್ಲವೇ. ಅದರಂತೆ ಹಿರಿಯರಿಗೆ ಕೃತಜ್ಞತಾಪೂರ್ವಕವಾಗಿ ವಂದಿಸಿ ಇಂದಿನ ಬದುಕಿನಲ್ಲಿ ಮುಂದಿನ ಪೀಳಿಗೆಗೆ ಶ್ರೇಯಸ್ಸು ಹಾರೈಸುವುದರೊಂದಿಗೆ ಪ್ರಯತ್ನಿಸುವುದೂ ನಮ್ಮ ಕರ್ತವ್ಯವಲ್ಲವೇ!

ಜಿಲ್ಲಾ ನ್ಯಾಯಾಧೀಶ ಮುದ್ದಪ್ಪನವರ, ಪಾರ್ಲಿಮೆಂಟ್ ಸದಸ್ಯರಾಗಿದ್ದ ಸೋಮಣ್ಣನವರ ಬಾಳಿನ ಮುಖ್ಯ ಚೇತನಶಕ್ತಿಯಾಗಿ, ಕಿರಿಯರ ಬಾಳಿಗೆ ದಾರಿದೀಪವಾಗಿ ಬದುಕಿ ಬಾಳಿದ ಬೆಳ್ಳಪ್ಪನವರು ತನ್ನ 53ನೇ ವಯಸ್ಸಿನಲ್ಲಿ 1938ನೇ ಇಸವಿ ಮೇ ತಿಂಗಳಲ್ಲಿ ತಾವು ಕಟ್ಟಿಸಿದ ಮನೆಯ ಗೃಹಪ್ರವೇಶವಾಗುವ ಮುಂಚೆಯೇ ವಿಧಿವಶರಾದರು. ಆ ಯ ಸ್ಸು ಮುಗಿದರೂ ಕೀರ್ತಿಶೇಷರಾದರು. ಪತ್ನಿ ಚಿನ್ನಮ್ಮನವರೂ ಸಾರ್ಥಕವಾಗಿ ಬದುಕಿ ತಮ್ಮ 73ನೇ ವಯಸ್ಸಿನಲ್ಲಿ 1975ನೇ ಇಸವಿಯಲ್ಲಿ ನಿಧನರಾದರು.

[ಮುಂದುವರೆಯುವುದು]

ಪ್ರಾಣಿಗಳ ಪ್ರಪಂಚ ನಿಮಗೆ ತಿಳಿದಿರಲಿ

○ ಒಂದು ಇರುವೆ ತನಗಿಂತ 60ಪಟ್ಟು ಹೆಚ್ಚು ಭಾರವಿರುವ ವಸ್ತುವನ್ನು ಹೊರಬಲ್ಲದು. ಮನುಷ್ಯ ಹೀಗೆ ಮಾಡುವುದಾಗಿದ್ದಿದ್ದರೆ, ಒಬ್ಬ ಆರೋಗ್ಯವಂತ ಮನುಷ್ಯ ತನ್ನ ಕಾರನ್ನೇ ಬೆನ್ನ ಮೇಲೆ ಹೊತ್ತು ತನ್ನ ಆಫೀಸಿಗೆ ಸುಲಭವಾಗಿ ಕೊಂಡೊಯ್ಯಬಹುದಿತ್ತು.

❁ ❁ ✱

○ ಕೆಲವು ಚಿಗಟಗಳು ತಮ್ಮ ಉದ್ದಳತೆಗಿಂತ ನೂರು ಪಟ್ಟು ಎತ್ತರಕ್ಕೆ ಹಾರಬಹುದು. ಮನುಷ್ಯ ಹೀಗೆ ಮಾಡುವುದಾಗಿದ್ದರೆ, 500ರಿಂದ 600 ಅಡಿ ಎತ್ತರಕ್ಕೆ ಹಾರಬಹುದಿತ್ತು. ಹಾಗೇನಾದರೂ ಸಂಭವಿಸಿದ್ದರೆ, ಆತ ಸುಲಭವಾಗಿ ಪ್ಯಾರಿಸ್‌ನ ಎಫಿಲ್‌ಟವರ್ ಅಥವಾ ನ್ಯೂಯಾರ್ಕ್‌ನ ಸ್ಟ್ಯಾಚು ಆಫ್ ಲಿಬರ್ಟಿಯನ್ನು ಕೂಡ ಹಾರಬಹುದಿತ್ತು. ಆಗ ಪ್ರತಿಯೊಬ್ಬರೂ 50ನೆಯ ಮಹಡಿಯಾದರೂ ಸಂ ಒಂದೇ ನೆಗೆತಕ್ಕೆ ತಲುಪಬಹುದಿತ್ತು. ಲಿಫ್ಟ್ ಅಥವಾ ಮೆಟ್ಟಿಲುಗಳ ಅಗತ್ಯವೇ ಇರುತ್ತಿರಲಿಲ್ಲ.

❁ ❁ ❁

○ ಮೊಲಗಳ ಮುಂದಿನ ಹಲ್ಲು 10 ಅಡಿ ಉದ್ದಕ್ಕೆ ಬೆಳೆಯುತ್ತದೆ. ಆದರೆ ಅವುಗಳು ಗೆಡ್ಡೆ, ಗೆಣಸು, ಬೇರುಗಳನ್ನು ತಿನ್ನಲು ಮುಂದಿನ ಎರಡು ಹಲ್ಲುಗಳನ್ನು ಉಪಯೋಗಿಸುವುದರಿಂದ ಅವು ಸವೆದು, ಸವೆದು ಉದ್ದ ಬೆಳೆಯದೆ ಚಿಕ್ಕದಾಗಿರುತ್ತವೆ. ಇಲ್ಲದಿದ್ದರೆ ಆನೆಯ ದಂತಗಳಿಗಿಂತ ಮೊಲಗಳ ಹಲ್ಲುಗಳೇ ಉದ್ದ ಇರುತ್ತಿದ್ದವು.

ಸಂಗ್ರಹ: **ಬಿಟ್ಟೀರ ಶಂಭು ಅರ್ಚನ, ಬೆಂಗಳೂರು.**

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು

ಇತ್ತೀಚಿಗಿನ ವರುಷಗಳಲ್ಲಿ ನಮ್ಮ ದೇಶದಲ್ಲಿ ಕೆಲವು ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ನ್ಯಾಯಾಲಯಗಳಲ್ಲಿ ಹೂಡುತ್ತಿರುವುದರಿಂದಾಗಿ ಆಡಳಿತಗಾರರು [ಸಚಿವರುಗಳು ಮತ್ತು ಉನ್ನತ ಅಧಿಕಾರಿಗಳು] ತಮ್ಮ ಸಾರ್ವಜನಿಕ ಜೀವನದಲ್ಲಿ ಎಸಗುತ್ತಿರುವ ಕೃತ್ಯಗಳು ಮತ್ತು ಭ್ರಷ್ಟಾಚಾರಗಳು ಬಯಲಿಗೆ ಬರಲಾರಂಭಿಸಿವೆ. ಇದರಿಂದಾಗಿ ಜನರಿಗೆ ನ್ಯಾಯಾಲಯಗಳಲ್ಲಿ

ಕುಯ್ಯಮುಡಿ ಜಿ. ಅಶ್ವಿನಿಕುಮಾರ್
ಬ ಳಲೆ

ವಿಶ್ವಾಸ ಹೆಚ್ಚಾಗಿದೆ. ತನಿಖಾ ದಳಗಳಾದ ಸಿ. ಬಿ. ಐ, ಸಿ. ಓ. ಡಿ, ಐ.ಬಿ. ಮುಂತಾದವುಗಳು ಚುರುಕುಗೊಂಡಿವೆ. ಹಾಗೆಯೇ ರಾಜಕೀಯ ವ್ಯಕ್ತಿಗಳು ಮತ್ತು ಅಧಿಕಾರಿ ವರ್ಗ ಎಚ್ಚರಗೊಂಡು ತಮ್ಮ ಸಾರ್ವಜನಿಕ ಜೀವನದಲ್ಲಿ ಸ್ವಲ್ಪಮಟ್ಟಿಗೆ ಮೌಲ್ಯಗಳಿಗೆ ಬೆಲೆಕೊಡುವ ಮಟ್ಟಿಗೆ ಬಂದಿದ್ದಾರೆ. ಇಂದು ಹವಾಲ, ಷೇರುಹಗರಣ, ಮೇವು ಹಗರಣ ಮುಂತಾದವುಗಳು ಬೆಳಕಿಗೆ ಬಂದದು ಕೂಡ ಇಂತಹ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳಿಂದಾಗಿ. ಹೀಗಿರುವಾಗ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಎಂದರೇನು ? ಇದನ್ನು ಯಾರು ಯಾವ ಸಂದರ್ಭದಲ್ಲಿ ಹೂಡಬಹುದು ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ಈ ಲೇಖನದಲ್ಲಿ ವಿವರಿಸುವ ಪ್ರಯತ್ನ ಮಾಡುತ್ತಿದ್ದೇನೆ.

ಯಾವುದೇ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು, ತಮ್ಮ ಹಕ್ಕುಗಳಿಗೆ ಚ್ಯುತಿ ಒದಗಿದಾಗ, ಅಸಹಾಯಕತೆಯಿಂದಾಗಲಿ, ಆರ್ಥಿಕ ಅಡೆತಡೆಗಳಿಂದಾಗಲಿ, ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಲು ಅಸಹಾಯಕರಾದಾಗ, ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿದ ವ್ಯಕ್ತಿಯೇ ಆಗಲಿ ಅಥವಾ ಸಂಘ ಸಂಸ್ಥೆಗಳೇ ಆಗಲಿ, ಅಂತವರ ಹಕ್ಕುಗಳ ರಕ್ಷಣೆಗೋಸ್ಕರ ನ್ಯಾಯಾಲಯಗಳಲ್ಲಿ ಹೂಡುವ ದಾವೆಗೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಎಂದು ಹೇಳಬಹುದು. ಇಂತಹ ಮೊಕದ್ದಮೆಯನ್ನು ನಾವು ನೇರವಾಗಿ ನ್ಯಾಯಾಲಯದಲ್ಲಿ ಹೂಡಬಹುದು. ಅಥವಾ ಪತ್ರದ ಮುಖಾಂತರ ತಿಳಿಸಿದರೂ ಕೂಡ, ಆ ಪತ್ರವನ್ನೆ ರಿಟ್ ಅರ್ಜಿ ಎಂದು ನ್ಯಾಯಾಲಯಗಳು ಪರಿಗಣಿಸುತ್ತವೆ. 1982ರಲ್ಲಿ ಸುಪ್ರೀಂ ಕೋರ್ಟಿನ 7 ಜನ ನ್ಯಾಯಾಧೀಶರುಗಳನ್ನೊಳಗೊಂಡ ನ್ಯಾಯಾಪೀಠವು ತೀರ್ಪು ನೀಡುವ ಸಂದರ್ಭದಲ್ಲಿ ನೀಡಿದ ವಿವರಣೆ ಹೀಗಿದೆ.

ಯಾವುದೇ ವ್ಯಕ್ತಿಯ ಹಕ್ಕುಗಳಿಗೆ ಚ್ಯುತಿ ಬಂದಾಗ, ಆ ವ್ಯಕ್ತಿ ಬಡತನದಿಂದಾಗಲಿ, ಅಸಹಾಯಕತೆಯಿಂದಾಗಲಿ, ವಿಕಲತೆಯಿಂದಾಗಲಿ, ಸಾಮಾಜಿಕ ಅಥವಾ ಆರ್ಥಿಕ ಪ್ರತಿಕೂಲ ಪರಿಸ್ಥಿತಿಯಿಂದಾಗಲಿ ನ್ಯಾಯಾಲಯಕ್ಕೆ ಹೋಗಲು ಅಸಹಾಯಕರಾದಾಗ, ಅದಕ್ಕೆ ಸಂಬಂಧಿಸಿದ ಅಥವ ಸಂಬಂಧವಿಲ್ಲದ ವ್ಯಕ್ತಿ ಅಥವಾ ಸಂಘ ಸಂಸ್ಥೆ ಸಾಕಷ್ಟು ಆಸಕ್ತಿ ಇದ್ದಲ್ಲಿ ಸಾಮಾನ್ಯ ವಿಷಯಗಳಿಗೆ ಸಂವಿಧಾನ 226 ನೆ ವಿಧಿಯಂತೆ ಹೈಕೋರ್ಟಿನಲ್ಲಿ ಮೂಲಭೂತ ಹಕ್ಕುಗಳ ಉಲ್ಲಂಘನೆಗೆ ಸುಪ್ರೀಂ ಕೋರ್ಟಿನಲ್ಲಿ ದಾವೆ ಹೂಡಬಹುದು. ದಾವೆಯನ್ನು ಬೇಕಾದರೆ ಪತ್ರದ ಮುಖಾಂತರವೂ ಕಳುಹಿಸಬಹುದು.

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ಹೂಡುವ ಅಧಿಕಾರ ಸಂವಿಧಾನದಲ್ಲಿ ನಮಗೆ ಇತ್ತೀಯಾದರೂ ಅದರ ಸದುಪಯೋಗ ಪಡೆಯಲು ನಾವು ಆರಂಭಿಸಿರುವುದು ಇತ್ತೀಚೆಗಷ್ಟೆ. ನಿಜವಾಗಲು ಈ ಮೊಕದ್ದಮೆಗಳಿಗೆ ಬೆಲೆ ನೀಡಿದ ನ್ಯಾಯಾಧೀಶರುಗಳೆಂದರೆ, ಆರ್. ಎಸ್. ಪಾಠಕ್, ಮತ್ತು ಪಿ. ಎನ್. ಭಗವತಿಯವರುಗಳು. ಸಂಘ ಸಂಸ್ಥೆಗಳು ಮತ್ತು ವ್ಯಕ್ತಿಗಳು ದಾವೆ ಹೂಡಿ ಸಾರ್ವಜನಿಕರಿಗೆ ನ್ಯಾಯ ಒದಗಿಸಿಕೊಟ್ಟ ನಿದರ್ಶನಗಳು ಇಂದು ಹಲವಾರು ಇವೆ. ಅವುಗಳಲ್ಲಿ ಮುಖ್ಯವಾಗಿ [ಸಂಘ ಹೂಡಿದ ದಾವೆ,] 1) 1894ರ ಬಂಧನ ಮುಕ್ತಿ ಮೋರ್ಚ V/s ಯೂನಿಯನ್ ಆಫ್ ಇಂಡಿಯಾ ವಿವಾದದಲ್ಲಿ, ಹರಿಯಾಣದಲ್ಲಿ ಜೀತದ ಆಳುಗಳ ವಿಮುಕ್ತಿಗಾಗಿ ಶ್ರಮಿಸತಕ್ಕ ಒಂದು ಸೇವಾ ಸಂಘವಾದ 'ಬಂಧನ ಮುಕ್ತಿ ಮೋರ್ಚ'ವು ಅಲ್ಲಿಯ ಫರಿದಾಬಾದ್‌ಜಿಲ್ಲೆಯಲ್ಲಿರುವ ಕಲ್ಲುಕೋರೆ ಒಂದರಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ, ತನ್ನ ವರದಿಯಲ್ಲಿ ಆ ಕಾರ್ಮಿಕರನ್ನು ಅಮಾನವೀಯ ರೀತಿ ನಡೆ [ಕೋರೆ ಮಾಲೀಕರು] ಸಿಕೊಳ್ಳುತ್ತಿದ್ದಾರೆಂದು ಮತ್ತು ಹೆಚ್ಚಿನ ಕಾರ್ಮಿಕರು ಜೀತದಾಳುಗಳೆಂದು ವಿವರಿಸಿ, ಪತ್ರಮುಖೇನ ಸುಪ್ರೀಂ ಕೋರ್ಟಿಗೆ ತನ್ನ ದೂರನ್ನು ಸಲ್ಲಿಸಿತು. ಆ ಪತ್ರವನ್ನೆ ರಿಟ್ ಅರ್ಜಿ ಎಂದು ಸುಪ್ರೀಂ ಕೋರ್ಟ್ ಪರಿಗಣಿಸಿ ಇಬ್ಬರು ನ್ಯಾಯವಾದಿಗ (Advocates) ಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಿ, ಆ ಕಲ್ಲು ಕೋರೆಗೆ ಭೇಟಿ ನೀಡಿ ವರದಿ ಸಲ್ಲಿಸುವಂತೆ ಆದೇಶಿಸಿತು. ವರದಿಯನ್ನು ಪರಿಶೀಲಿಸಿ ಮುಂದೆ ಆ ಕಾರ್ಮಿಕರನ್ನು ಬಂಧನದಿಂದ ಮುಕ್ತಿಗೊಳಿಸಲು ಸರಕಾರಕ್ಕೆ ಆದೇಶವನ್ನು ನೀಡಲಾಯಿತು.

2. ಇನ್ನೊಂದು ನಿದರ್ಶನವೆಂದರೆ (ಒಬ್ಬ ವ್ಯಕ್ತಿಹೂಡಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗೆ ಉದಾಹರಣೆ) ಲಕ್ಷ್ಮೀಕಾಂತ್ ಪಾಂಡೆ V/s ಯೂನಿಯನ್ ಆಫ್ ಇಂಡಿಯಾ ಕೇಸ್. ಇದರಲ್ಲಿ ಕೆಲವು ಸಾಮಾಜಿಕ ಹಾಗೂ ಸ್ವಯಂ ಸೇವಕ ಸಂಘಗಳು, ದೇಶಿಯ ಅನಾಥ ಮಕ್ಕಳನ್ನು ವಿದೇಶಿ ಪೋಷಕರಿಗೆ ಒಪ್ಪಿಸುವವರಿಂದಾಗಿ

ಆ ಮಕ್ಕಳು ಚಿಕ್ಕ ವಯಸ್ಸಿನಲ್ಲಿ ದೂರ ದೇಶದ ಪ್ರಯಾಣದಿಂದಾಗಿ ಬಳಲುವುದರ ಜೊತೆಗೆ ಆಶ್ರಯ ಮತ್ತು ಮುಂದಿನ ಜೀವನದ ಬಗ್ಗೆ ಅಸ್ಥಿರತೆಯನ್ನು ಎದುರಿಸಬೇಕಾಗುತ್ತದೆ ಎಂದು ಖಂಡಿಸಿ 1987ರಲ್ಲಿ ಲಕ್ಷ್ಮಿಕಾಂತ್ ಪಾಂಡೆರವರು ಪತ್ರ ಮುಖೇನ ಸುಪ್ರೀಂಕೋರ್ಟಿಗೆ ದೂರು ಸಲ್ಲಿಸಿದರು. ಆಗಿನ ಸುಪ್ರೀಂ ಕೋರ್ಟ್‌ನ ಶ್ರೇಷ್ಠ ನ್ಯಾಯಾಧೀಶರಾಗಿದ್ದಂತಹ ಪಿ. ಎನ್. ಭಗವತಿಯವರು ಆ ಪತ್ರವನ್ನೇ ಮೊಕದ್ದಮೆ ರಿಟ್ ಎಂದು ಪರಿಗಣಿಸಿ, ಮಕ್ಕಳ ಕಲ್ಯಾಣಕ್ಕಾಗಿ ಕೆಲವೊಂದು ಮಾರ್ಗಸೂಚಿಗಳನ್ನು ಸೂಚಿಸಿ ಅವುಗಳನ್ನು ಅನುಸರಿಸುವಂತೆ ಸರಕಾರಕ್ಕೆ ಆದೇಶ ನೀಡಿ ತೀರ್ಪು ನೀಡಿದರು. ಮೇಲಿನವುಗಳಲ್ಲದೆ ಇತ್ತೀಚೆಗೆ ಹವಾಲ ಮುಂತಾದ ಹಗರಣಗಳು ಕೂಡ ಕೆಲವು ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿದ ಮಹನೀಯರು ಹೂಡಿದ ಮೊಕದ್ದಮೆಗಳಿಂದಾಗಿ ಬಯಲಿಗೆ ಬಂದಿರುವುದು ನಮಗೆಲ್ಲ ತಿಳಿದ ವಿಷಯ.

ಹೀಗೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ಸಾರ್ವಜನಿಕರು ಹೂಡುತ್ತಿರುವುದರಿಂದ ಇಂದು ಸಾರ್ವಜನಿಕ ರಂಗ ಸ್ವಲ್ಪಮಟ್ಟಿಗೆ ತಿಳಿಯಾಗುತ್ತಿದೆ. ಈ ಒಂದು ಅಧಿಕಾರ ನಮಗೆ ಇರುವುದರಿಂದ, ನಾವು ಸ್ವಲ್ಪಮಟ್ಟಿಗೆ ಉಸಿರಾಡುವ ಮಟ್ಟಕ್ಕೆ ಬಂದಿದ್ದೇವೆ. ಇಂತಹ ಒಂದು ಅಧಿಕಾರವನ್ನು ನಾವು ಸದುಪಯೋಗಪಡಿಸಿಕೊಳ್ಳುವುದು ಉತ್ತಮ. ಆದಕ್ಕಾಗಿ ಜನರಿಗೆ ತಿಳುವಳಿಕೆ ನೀಡುವ ದೃಷ್ಟಿಯಿಂದ ಮಾಧ್ಯಮವು ಇದಕ್ಕೆ ಹೆಚ್ಚಿನ ಪ್ರೋತ್ಸಾಹ ನಿಡಬೇಕು. ಒಟ್ಟಿನಲ್ಲಿ ಮೇಲಿನ ನನ್ನ ಲೇಖನದಿಂದಾಗಿ, ತುಳಿತಕ್ಕೆ ಒಳಗಾದ ವ್ಯಕ್ತಿಗಳ ರಕ್ಷಣೆಗೆ ಏನಾದರೂ ಮುಂದೆ ಬಂದಲ್ಲಿ ನನ್ನ ಲೇಖನ ಸಾರ್ಥಕವಾದಿತು ಎಂಬುದೆ ನನ್ನ ಆಶಯ. ○

ಸುವರ್ಣ ಸ್ವಾತಂತ್ರ್ಯೋತ್ಸವದಲ್ಲಿ ಸನ್ಮಾನಿತಳಾದ ನಮ್ಮ ಯುವ ಪ್ರತಿಭೆ

ಮೂಲತ ಕೊಡಗು ಜಿಲ್ಲೆಯ ಭಾಗಮಂಡಲ ನಾಡಿನ ಪೆರಬಾಯಿ ಮನೆತನದ ಕುಶಾಲನಗರದಲ್ಲಿ ವಾಸವಾಗಿರುವ ಶ್ರೀ ಮತ್ತು ಶ್ರೀಮತಿ ದಿ|| ಪೊನ್ನಪ್ಪ ಮತ್ತು ಶಾರದಾ ದಂಪತಿಗಳ ಐದು ಜನ ಮಕ್ಕಳಲ್ಲಿ ಕಿರಿಯ ಮಗಳಾಗಿದ್ದು, ಇಬ್ಬರು ಅಕ್ಕಂದಿರು ಹಾಗೂ ಇಬ್ಬರು ಅಣ್ಣಂದಿರು [ಸುಬ್ರಹ್ಮಣಿ, ಕಾಮಾಕ್ಷಿ, ಪುಷ್ಪವೇಣಿ, ದೇವಿಪ್ರಸಾದ್ ಇರುವರು.]

ನತದೃಷ್ಟ ದಂಪತಿಗಳ ಭಾಗ್ಯಶಾಲಿನಿಯೇ ಕುಮಾರಿ ರೇಖಾ.ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕುಶಾಲನಗರದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಮುಗಿಸಿದ್ದು, 7ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 88 ಅಂಕಗಳನ್ನು ಗಳಿಸಿ, ಶಾಲೆಗೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾಳೆ.

ಪ್ರೌಢವ್ಯಾಸಂಗವನ್ನು ಕುಶಾಲನಗರದ ಫಾತಿಮಾ ಪ್ರೌಢ ಶಾಲೆಯಲ್ಲಿ ಮುಗಿಸಿ, ಎಸ್.ಎಸ್.ಎಲ್.ಸಿ. ವಾರ್ಷಿಕ ಪಬ್ಲಿಕ್ ಪರೀಕ್ಷೆಯಲ್ಲಿ ಶೇಕಡ 86 ಅಂಕಗಳನ್ನು ಪಡೆದುಕೊಂಡಿರುತ್ತಾಳೆ.

ಪಿ ಯು.ಸಿ. ವಿದ್ಯಾಭ್ಯಾಸವನ್ನು ಕುಶಾಲನಗರ ಕನ್ನಡ ಭಾರತಿ ಪದವಿಪೂರ್ವ ಕಾಲೇಜಿನಲ್ಲಿ ಮುಗಿಸಿದ್ದು, ಶೇಕಡ 78 ಅಂಕಗಳನ್ನು ಗಳಿಸಿ, ಕಾಲೇಜಿಗೆ ಹಾಗೂ



ಕುಮಾರಿ ರೇಖಾ

ಜಿಲ್ಲೆಗೆ ಕಲಾವಿಭಾಗದಲ್ಲಿ ಮೊದಲನೇ ಸ್ಥಾನವನ್ನು ಪಡೆದುಕೊಂಡಿದ್ದಾಳೆ. 1997 98ನೇ ಸಾಲಿನ ಜಿಲ್ಲೆಯ ಉತ್ತಮ ವಿದ್ಯಾರ್ಥಿನಿಯೆಂದು ಕೊಡಗು ಜಿಲ್ಲಾ ಆಡಳಿತ 1998ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಸನ್ಮಾನಿತಳಾಗಿದ್ದಾಳೆ. ಅಲ್ಲದೆ ಸ್ಥಳೀಯ ಸಂಘ-ಸಂಸ್ಥೆಗಳಿಂದಲೂ ರೋಟರಿ, ಆದರ್ಶ ಯುವಕ ಸಂಘ ಇವರಿಂದಲೂ ಸನ್ಮಾನಿತಗೊಂಡಿರುತ್ತಾಳೆ.

ಕ್ರೀಡೆಯಲ್ಲಿ ಚಿಕ್ಕಂದಿನಿಂದಲೂ ಹೆಚ್ಚು ಆಸಕ್ತಿ ಇರುವ ಇವಳು ಶಾಲೆಯ ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳು ನಡೆಸುವ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದುಕೊಂಡಿದ್ದಾಳೆ. ಅಲ್ಲದೆ 6 ಮತ್ತು 7ನೇ ತರಗತಿಗಳಲ್ಲಿ, ಶಟಲ್ ಕಾಕ್ ಕ್ರೀಡೆಯಲ್ಲಿ ಜಿಲ್ಲಾಮಟ್ಟದವರೆಗೆ ನಾಯಕಿಯಾಗಿ ಭಾಗವಹಿಸಿ ನಂತರ ಇದೇ ಕ್ರೀಡೆಯಲ್ಲಿ 8ರಿಂದ 10ನೇ ತರಗತಿಗಳಲ್ಲಿ ತಾಲ್ಲೂಕು ಮಟ್ಟದವರೆಗೆ ನಾಯಕಿಯಾಗಿ ಭಾಗವಹಿಸಿದ್ದಾಳೆ. 9ನೇ ತರಗತಿಗಳಲ್ಲಿ ವಾಲಿಬಾಲ್ ಕ್ರೀಡೆಯಲ್ಲಿ ಆಟಗಾರ್ತಿಯಾಗಿ ಜಿಲ್ಲಾಮಟ್ಟದವರೆಗೆ ಭಾಗವಹಿಸಿದ್ದಾಳೆ. ನಂತರ 10ನೇ ತರಗತಿಯಲ್ಲಿ ಇದೇ ಕ್ರೀಡೆಯಲ್ಲಿ ಉಪನಾಯಕಿಯಾಗಿ ಎರಡು ಬಾರಿ [ಗ್ರಾಮೀಣ ಶಾಲಾ ಕ್ರೀಡಾಕೂಟ ಹಾಗೂ ಅಂತರ ಶಾಲಾ ಕ್ರೀಡಾಕೂಟ] ರಾಜ್ಯಮಟ್ಟದವರೆಗೆ ಭಾಗವಹಿಸಿದ್ದಾಳೆ.

ಪಿ.ಯು.ಸಿ. ಮಟ್ಟದಲ್ಲಿ ಯಾವುದೇ

ರೀತಿಯ ಕ್ರೀಡೆಗಳಲ್ಲಿ ಭಾಗವಹಿಸಲಿಲ್ಲ. ಕಾರಣ ಕನ್ನಡ ಮಾಧ್ಯಮವನ್ನು ಬಿಟ್ಟು, ಆಂಗ್ಲ ಮಾಧ್ಯಮವನ್ನು ಆರಿಸಿಕೊಂಡಿದ್ದ ರಿಂದಲೂ, ದೈಹಿಕಶಿಕ್ಷಕರ ಅಭಾವ ಹಾಗೂ ದೈಹಿಕ ಶಿಕ್ಷಕರ ಮುಷ್ಕರದಿಂದಾಗಿ ಭಾಗ ವಹಿಸಲಾಗಲಿಲ್ಲ.

ಇವರ ತಂದೆ ಸರಕಾರಿ ಪ್ರಾಥಮಿಕ ಶಾಲೆ 7ನೇ ಹೊಸಕೋಟೆ, ಕೊಡಗು ಇಲ್ಲಿ ಮುಖ್ಯೋಪಧ್ಯಾಯರಾಗಿದ್ದು, 1986 ಜುಲೈ 1ರಂದು ಸೇವೆಯಲ್ಲಿರುವಾಗಲೇ ದೈವಾಧೀನರಾದರು. ಹಾಗೂ ತಾಯಿ ಯವರು ಗೃಹಿಣಿಯಾಗಿದ್ದು, 1997, ಜೂನ್ 7ರಂದು ದೈವಾಧೀನರಾದರು.

'ಸಾಧಿಸುವ ಛಲವಿದ್ದರೆ ಮಾತ್ರ ಗುರಿ ಮುಟ್ಟಲು ಸಾಧ್ಯ' ಎನ್ನುವ ನಂಬಿಕೆ ಯನ್ನು ಇಟ್ಟುಕೊಂಡಿರುವಳು. ಉತ್ತಮ ಪುಸ್ತಕವನ್ನು ಓದುವುದಲ್ಲದೆ, ಪ್ರಬಂಧ ಬರೆಯುವುದು, ಹಾಡು ಹೇಳುವುದು, ಕ್ರೀಡೆ ಇತ್ಯಾದಿಗಳಲ್ಲಿ ಆಸಕ್ತಿಯುಳ್ಳವ ಳಾಗಿದ್ದಾಳೆ. ಇವಳ ಈ ವ್ಯಕ್ತಿತ್ವವನ್ನು ಅರೆಭಾಷೆ ಜನಾಂಗಕ್ಕೆ ಪರಿಚಯಿಸಲು 'ಕೊಡಗು ಸಂಗಾತಿ' ಹೆಮ್ಮೆ ಪಡುತ್ತದೆ. ಹಾಗೂ ಉತ್ತಮ ಭವಿಷ್ಯವನ್ನು ಹಾರೈಸು ತ್ತದೆ. ○

—ಪಟ್ಟಡ ಪ್ರಭಾಕರ್,

ಗೌಡರ ವಿವಾಹ ಪದ್ಧತಿಯ ಶೋಭಾನೆಗಳು

6. ದಿಬ್ಬಣ ಹೊರಡಿಸುವ ಹಾಡು : [ಉಳಿದ ಭಾಗ]


ಗುರುಗಂಜಿ ಬಣ್ಣದ ರವಕೆಯ ತೊಟ್ಟಾರು ಅತ್ತೆಮ್ಮ। ಅಳಿಯನರಮನೆಗೆ ಹೊರಟಾರು। ತಲೆಯ ಬಾಚಿದರು ಮಲ್ಲಿಗೆ ಹೂವ ಮುಡಿದಾರು ಅತ್ತೆಮ್ಮ। ಅಳಿಯಾನರಮನೆಗೆ ಹೊರ ಟಾರು॥ ಮುನ್ನಲ್ಲಿ ಮುನ್ನೂರು ವರಹ ಕಟ್ಟೇದಾರು ಮಾವ ನವರು ಅಳಿಯನರಮನೆಗೆ ಹೊರಟಾರೀಗ॥ ಸೆರಗಲ್ಲಿ ಸೆರೆಹೊನ್ನ ಕಟ್ಟಿದಾರು ಅತ್ತೆಮ್ಮ ಅಳಿಯನರಮನೆಗೆ ಹೊರಟಾರು॥ ಗೆಜ್ಜೆ ಕತ್ತಿಪನೆ ಕೊಡೆ ಹಿಡಿದಾರು ಅತ್ತೆಮ್ಮ। ಅಳಿಯನರಮನೆಗೆ ಹೊರಟಾರು। ಸಣ್ಣಕ್ಕಿ ಬಯಲಲ್ಲಿ ಹೊರಟುವೇ ಹೋದಾರು। ದೂರದಿಂದಲಿ ಅಳಿಯ ನೋಡುತ್ತಾನೆ॥ ನನ್ನ ಅತ್ತೆ ಮಾವ ನವರು ಸಣ್ಣಕ್ಕಿ ಬಯಲಲ್ಲಿ ಬರುತ್ತಾರೆ॥ ಎದುರಿಗೆ ಹಾಲು ನೀರು ತೆಕ್ಕೊಂಡು ಹೋಗಿರೆಂದು ಕೂತಲ್ಲಿಂದ ಹೇಳೀದಾನು। ಎದುರೀಗೆ ಹಾಲು ನೀರುಗಳನೆಲ್ಲ ತಂದಾರೀಗ। ನೀರನ್ನೆ ತೆಗೆದು ಕೈ ಕಾಲು ಮುಖ ತೊಳೆದು ಹಾಲನ್ನೆ ತೆಗೆದು ಬಾಯಾರಿಕೆ ಕಳೆದಾರು। ತೂಗುವ ಮಂಚದಲಿ ಕೂತಾರೀಗ॥ ಸೂಡಿ, ಸೂಡಿ ವೀಳ್ಯದ ಹರಿವಾಣದೊಳಿಂಸಿ ಮಾವಗೆ ವೀಳ್ಯವ ಕೊಡೀಸಿದರು। ವೀಳ್ಯವನ್ನೆ ಮೆದ್ದಾರು ಮಾವನವರು ದೊಡ್ಡಾ ಮಾಳಿಗೆಯೊಳಗೆ ನಡೆದಾರು॥ ಮುನ್ನಿಂದ ಮುನ್ನೂರು ವರಹ ಬಿಚ್ಚಿದಾರು ಮಾವನವರು ಅಳಿಯನ ಸೆರಗಿಗೆ ಕಟ್ಟಿದಾರು। ಅತ್ತೆಮ್ಮ ಹೋದಾರು ಸೆರಗಿಂದ ಸೆರೆಹೊನ್ನ ಬಿಚ್ಚಿ ಅಳಿಯನ ಸೆರಗೀಗೆ ಕಟ್ಟಿದಾರು॥ ಏಳೇಳು ಇಂದ್ರವನೇ ಏಳೇಳು ಚಂದ್ರವನೇ ಏಳೇಳು ಗಂಭಿಗರೂಡನೇ। ಹಸೆ ಮೇಲಿಂದ ಎದ್ದಾನು ಮದುವಣ್ಣ। ಅಕ್ಕ ಬಾರಕ್ಕ ಕಳಸ ಕನ್ನಡಿ ಹಿಡಿ ನೀನೂ ಮುತ್ತಿನ ಮೆಟ್ಟು ಕಲ್ಲು ಇಳಿ ಮುಂದೆ॥ ಅಕ್ಕ ಬಂದಾಳು। ಕಳಸ ಕನ್ನಡಿ ಹಿಡಿಯ ಲಿಕೆ। ತಾಯವ್ವ ಎದ್ದಾರು ಕಳಸ ಕನ್ನಡಿ ತೆಗೆದು ಕೊಟ್ಟಾರು। ಮಗಳ ಕೈಯಲ್ಲಿ ಕೊಟ್ಟರೀಗ। ಮುತ್ತಿನ ಮೆಟ್ಟು ಕಲ್ಲು ಇಳು ದಾಳು ಅಕ್ಕಯ್ಯ ಚಪ್ಪರದ ಒಳ ಮಧ್ಯ ಮುತ್ತಿನ ಕಟ್ಟಡಿಯಲಿ ದಿಬ್ಬಣ ಇಳದು ನಿಂತಾರೀಗ॥ ಹತ್ತು ಬೆರಳಿಗೆ ಕೆತ್ತಿಸಿದ ಉಂಗುರವಿಟ್ಟು ತಂದೇಗೆ ವೀಳ್ಯ ಕೊಟ್ಟಾನು॥ ತಂದೆ ಪಾದ ಹಿಡಿದು ಶರಣವ ಮಾಡಿದಾನು। ಆಯುಸ್ಸು ವಂತನಾಗು ಮಗನೇ ಭವಿಷ್ಯಕ್ಕೆ ದೊಡ್ಡವನಾಗು ಪುತ್ರರ ಫಲವ ಪಡೇ ನೀನು॥ ಹತ್ತು ಬೆರಳಿಗೆ ಕೆತ್ತಿಸಿದ ಉಂಗುರವನ್ನಿಟ್ಟು, ಮಾವ ನಿಗೆ ವೀಳ್ಯ ಕೊಟ್ಟಾನು ಮದುವಣ್ಣ ಮಾವ ಬುದ್ಧಿಯ ಹೇಳಿ ದಾರು॥ ಮಾವನವರ ಮನೇಲಿ ಭಾವಮೈದುನರು ಹೆಚ್ಚು। ಬಲು ಜೋಕೆಯಲಿ ಹೋಗೀ ಬರಾಬೇಕು॥ ಕುದುರೆ ಮೇಲೇರಿ ದಾನು ಮದುವಣ್ಣ। ಹಿಂದೆ ತಿರುಗಿ ನೋಡಿದಾನು ಮಂದಿ ಸಾಲದೆಂದು ಮೊಗಬಾಡಿ। ಮದುವಣ್ಣ। ರಾಗಿ ಕಾಳಂತೆ ರಾಜ್ಯೆಲ್ಲ ನನ್ನ ಬಳಗಾ ಬಳಗಕ್ಕೊಂಡೋಲೆ ಬರೆದಾನು॥ ಕುದುರೆಯ ಮೇಲೇರಿ ಮುಂದೆ ನೋಡಿದಾನು ಮದುವಣ್ಣ। ಮಂದಿ ಸಾಲದೆಂದು ಮೊಗಬಾಡಿ ಮದುವಣ್ಣ ಸಾಸುವೆ ಕಾಳಂತೆ ಊರೆಲ್ಲ ಅಕ್ಕ ತಂಗಿಯರು ಊರಿಗೆ ಒಂದು ಓಲೆ ಬರೇ ದಾನು॥ ಹಿಂದೆ ಸಾವಿರ ಮುಂದೆ ಸಾವಿರ ಎರಡು ಸಾವಿರ ಜನ ರೆಲ್ಲಾ। ಎರಡು ಸಾವಿರ ಜನವೆಲ್ಲ ದಿಬ್ಬಣವನ್ನೆ ಹೊರಟಾರು॥ ಮಾವನಮನೆಯಲ್ಲಿ ಅತ್ತಿಗೆ ನಾದುನಿಯರು ಬಲು ಹೆಚ್ಚು। ವೀಳ್ಯದಲಿ ಕಪಟ ತಂದಿರುಸ್ಯಾರು ಮಗನೇ ಬಲು ಜೋಕೆಯಲಿ ಕನ್ಯೆಯ ಕರಕೊಂಡು ಅರಮನೆಗೆ ಬರಾಬೇಕು॥

[ಮುಂದಿನ ಸಂಚಿಕೆ ನೋಡಿ]

ಹಿತನುಡಿ

ಭಕ್ತಿಯಿಂದಲೇ ಮುಕ್ತಿ। ಭಕ್ತಿಯಿಂದಲೆ ಶಕ್ತಿ।
ಭಕ್ತಿ–ವಿರಕ್ತಿಯುಳಿದರೀ ಜಗದಲಿ।
ಮುಕ್ತಿಯಿಲ್ಲೆಂದ ಸರ್ವಜ್ಞ॥

ಸಂಗಾತಿ ಪದಬಂಧ-4



ಎಡದಿಂದ ಬಲಕ್ಕೆ

1 'ಜನ ಬದುಕು' ಕೊನೆಯಲ್ಲಿ ಎರಡಕ್ಷರದ ಕಾಡನ್ನು ಹೊಂದಿದೆ–5
3 ಮೊದಲಲ್ಲಿ ಒಂಬತ್ತನ್ನು ಹೊಂದಿರುವ ಒಂದು ಕ್ಷಾರ ಪದಾರ್ಥ–5
5 ಐದಕ್ಷರದ 'ಆಲಕ್ಷಿಸು'-5
7 ಕಷ್ಟರಹಿತ ಬದುಕು–5
10 ದಯಾನಂದನ ಹಸು–2
11 ರವಿಯು ಕುರಿತು ಕಾವ್ಯ ಬರೆದವ–2
12 'ಆನೆಯ ಕುಟುಂಬ'ವನ್ನು ಹೀಗೆ ಹೇಳೋಣವೇ ?–9
13 ರಾಜ ಪೂಜಿಸುತ್ತಿರುವ ಪುರುಷೋತ್ತಮ–2
14 ಮೆಂಕಿಯು ಕೈಯನ್ನು ಸುಟ್ಟದ್ದು–2
15 'ಒಂದೇ ಕಾಲದ' ಎಂಬರ್ಥ ನೀಡುವ ಪದ 5
17 ಐದಕ್ಷರದ 'ಸಮತೂಕ'–5
19 ಮೃತ್ಯುದೇವತೆಯ ಸೇವಕ–5
20 ನರ್ತಕರು ಮಾಡಿಕೊಂಡ ಹೊಸ ಒಪ್ಪಂದ–5

ಸಂಗಾತಿ ಪದಬಂಧ 3ಕ್ಕೆ ಉತ್ತರ

ಎಡದಿಂದ ಬಲಕ್ಕೆ

1 ಗಜವದನ 3 ಸಹಾನುಭೂತಿ
5 ನವಸದನ 7 ನಯವಂಚಕ
9 ವಿಲೇಪನ 11 ನಿರಂತರ
13 ಸಮುದ್ರತೀರ 14 ಅಧಿನಿಯಮ
16 ಅವಿದ್ಯಾವಂತ 18 ಸಮತೋಲನ
19 ಸರಳಯಾಗ

ಮೇಲಿನಿಂದ ಕೆಳಕ್ಕೆ

1 ಗಗನ 2 ನಮನ
3 ಸಮಾನ 4 ತಿರುಕ
6 ದರ್ಶನದ ಸಮಯ 8 ಯಮುನಿ ವಿರಚಾವಿ 9 ವಿಚಿತ್ರ 10 ದರಿದ್ರ
12 ರಮಿಸು 14 ಅಗಸ 15 ಮನನ
16 ಅರಸ 17 ತರಂಗ.

ಮೇಲಿನಿಂದ ಕೆಳಕ್ಕೆ

1 ಜಾನಕಿಯ ತಂದೆ–3
2 ಕನಸು ನಿಜವಾಗುವ ಸ್ಥಿತಿ–3
3 'ನಗುವಂತೆ ಮಾಡು' ಎಂಬುದನ್ನು ಇನ್ನೂ ಸಂಕ್ಷೇಪಿಸಿ–3
4 ನವೀನ ವಾಸವಾಗಿರುವ ಪಟ್ಟಣ ಕೆಳಗಿನಿಂದ ಮೇಲೆ–3
6 'ವರನ ಛತ್ರಿ' ಕೆಳಗಿನಿಂದ ಮೇಲಕ್ಕೆ ಹೋಗಿದೆ-7
8 'ವ್ಯಾಪಾರಿಗಳ ಪ್ರೋತ್ಸಾಹ'ವನ್ನು ಹೀಗೆ ಹೇಳಿ-7
9 ಕಾವೇರಿ ನೋಡಿದ 'ಇಂದ್ರಧನು'-5
15 ಸರ್ವರೂ ನೀಡಿದ ನೆರವು-3
16 'ಶಾಶ್ವತ'ಕ್ಕೆ ವಿರುದ್ಧವಾದುದು-3
17 ಸತೀಶ ಕಂಡ ಸಭ್ಯ ವ್ಯಕ್ತಿ-3
18 ನರ್ತಕಿ ನೀಡಿದ ವಂದನೆ-3

ರಚನೆ : ಬಿ. ಕೆ. ಶ್ರೀಧರ, ಪುತ್ತೂರು.

ಟೀಕೆ ಟಿಪ್ಪಣಿ

ಮೈಸೂರಿನ ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷಗಿರಿಯ ಪರಿ

ತಾ॥ 15–8–1998ರಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 51 ವರ್ಷ ತುಂಬಿರುವುದು ಎಲ್ಲಾ ಜನತೆಗೆ ಗೊತ್ತಿರುವ ವಿಷಯ. ಇದನ್ನು 'ಸ್ವರ್ಣ ಜಯಂತಿ' ಎಂದು ಸಹ ಕರೆಯುತ್ತಾರೆ. ಈ ಉತ್ಸವವನ್ನು ದೇಶದ ಮೂಲೆ ಮೂಲೆಗಳಲ್ಲಿ ಆಚರಿಸಿ ದೇಶಕ್ಕೆ ನಿಷ್ಠೆಯನ್ನು ವ್ಯಕ್ತಪಡಿಸುವುದು ಪ್ರತಿಯೊಬ್ಬ ಪ್ರಜೆಯ ಹಕ್ಕು ಹಾಗೂ ಕರ್ತವ್ಯವಾಗಿದೆ.

ಈ ರೀತಿಯ ಉತ್ಸವವನ್ನು ನಾವು ಆಚರಿಸಬೇಕೆಂದು ಕೊಡಗು ಸಂಗಾತಿ ಬಳಗ, ಅರೆಭಾಷಿಕ ಸಾಂಸ್ಕೃತಿಕ ಸಮಿತಿ ಹಾಗೂ ಮಹಿಳಾ ಸಂಘಟನೆ ಸೇರಿ ಚರ್ಚಿಸಿದೆವು. ಇದಕ್ಕೆ ಕೊಡಗು ವಿದ್ಯಾಸಂಘ ಮೈಸೂರು ಇದರ ಅಧ್ಯಕ್ಷರನ್ನು ಸಂಪರ್ಕಿಸಿ ಈ ಚರ್ಚೆಯಲ್ಲಿ ಭಾಗವಹಿಸಲು ಕೋರಲಾಗಿ ಕೊಡಗು ಸಂಗಾತಿ ಬಳಗಕ್ಕೆ ಭರವಸೆಯನ್ನು ನೀಡಿ, ಅಧ್ಯಕ್ಷರು ಕೊನೆಗೆ ಕೆಲಸದ ನಿಮಿತ್ತ ಬರಲಿಲ್ಲ. ಕೊನೆಗೆ ವಿಷಯ ತಿಳಿದ ಅಧ್ಯಕ್ಷರು ಗೌಡ ವಿದ್ಯಾಸಂಘದಲ್ಲಿ 50ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲು ತೀರ್ಮಾನಿಸಿದ್ದೇವೆ, ನಾವು ಮೈಸೂರಿನಲ್ಲಿರ ತಕ್ಕ ಜನಾಂಗದ ಸರ್ವರಿಗೂ ಆಮಂತ್ರಣ ಕಳುಹಿಸುತ್ತೇವೆ. ಜನಾಂಗದವರೆಲ್ಲರೂ ಸೇರಿ ಆಚರಿಸೋಣ ಎಂಬ ಸುದ್ಧಿ ನನಗೆ ವಿದ್ಯಾರ್ಥಿ ನಿಲಯದ ಮೇನೆಜರ್ ಅವರಿಂದ ತಿಳಿದುಬಂದಿತು. ಆಮಂತ್ರಣ ಪತ್ರಿಕೆ ಮುದ್ರಿಸಲಾಗಿದೆ. ಇನ್ನೇನು ಮೈಸೂರಿನಲ್ಲಿರುವ ನಮಗೆಲ್ಲರಿಗೂ ಕಳುಹಿಸುತ್ತಾರೆ ಎಂದು ತಿಳಿದುಕೊಂಡಿದ್ದ ನಮಗೆ ನಿರಾಶೆ ಕಾದಿತ್ತು. ಅಧ್ಯಕ್ಷರು ಮಹಿಳಾ ಸಂಘಟಕರಿಗೆ ಮಾತ್ರ ಬಾಯಿ ಮಾತಿನಲ್ಲಿ ತಿಳಿಸಿ, ಬೇಕಾದವರಿಗೆ ಮಾತ್ರ 15 ಆಮಂತ್ರಣ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಿ, ಬೇರೆ ಯಾರಿಗೂ ಕಳುಹಿಸುವುದು ಬೇಡವೆಂದು ತಡೆ ಹಿಡಿದಿರುವ ವಿಷಯ ಉಚಿತವೇ ?

ನಾವು ಜನಾಂಗದ ಸಾಂಪ್ರದಾಯಿಕ ಉಡಿಗೆಯಲ್ಲಿ ಇದೇ ಮೊದಲ ಬಾರಿಗೆ ಮೈಸೂರಿನ ಗೌಡ ವಿದ್ಯಾಸಂಘದಲ್ಲಿ ಆಚರಿಸಿದ ಹೆಗ್ಗಳಿಕೆ ಪಡೆದುಕೊಳ್ಳುವ, ಇದೂ ಜನಾಂಗದ ಚರಿತ್ರೆಯಲ್ಲಿ ಉಳಿದು ಮುಂದಿನ ಪೀಳಿಗೆಗೆ ದಾರಿದೀಪವಾಗಲೆಂದು ತಿಳಿದು ಕಾದಿದ್ದರೆ, ನಮಗೆ ಕಾದಿತ್ತು ನಿರಾಶೆ. ಈ ವಿಷಯವಾಗಿ ಕೆಲವರಿಂದ ಚರ್ಚೆಯು ಸಹ ಧ್ವಜಾರೋಹಣದಂದು ನಡೆದಾಗ, ಅಧ್ಯಕ್ಷರು ತಮ್ಮ ತಪ್ಪನ್ನು ಅರ್ಥೈಸಿ, ಮ್ಯಾನೇಜರ್‌ರವರ ಮೇಲೆ ಹಾಕಿದರಂತೆ. ಇದು ಯಾವ ರೀತಿಯ ನ್ಯಾಯ ನೀವೆಹೇಳಿ? ತನ್ನ ತಪ್ಪನ್ನು ತಿದ್ದಿಕೊಳ್ಳುವ ರೀತಿಯೆ ಇದು ? ಮೈಸೂರಿನಲ್ಲಿರುವ ಗೌಡಜನಾಂಗದವರೆಲ್ಲರಿಗೂ ಆಮಂತ್ರಣ ಕಳುಹಿಸಿದ್ದರೆ ಇವರ ಘನತೆಯೇನು ಕಡಿಮೆಯಾಗುತ್ತಿತ್ತು ? ಅಧ್ಯಕ್ಷರಾದವರು ಜನಾಂಗವನ್ನು ಒಂದು ವೇದಿಕೆಗೆ ತಂದು ಮುನ್ನಡೆಸುವ ಜವಾಬ್ದಾರಿಯಿರುವವರು ಆಗಿರಬೇಕು. ಬದಲಾಗಿ ಜನಾಂಗದವರನ್ನು ತೀರ ಅಸಡ್ಡೆ ಭಾವನೆಯಿಂದ ಕಾಣಬಹುದೇ ? ಅಧ್ಯಕ್ಷ ಪದವಿಯ ಬಗ್ಗೆ ನಮಗೆ ಬಹಳ ಅಭಿಮಾನವಿದೆ. ಆ ಪದವಿಗೆ ಯಾವಾಗಲೂ ಕುಂದು ಬರಬಾರದೆಂಬ ಅಭಿಪ್ರಾಯದವನು ನಾನು. ಈ ಹಿಂದೆ ವಿದ್ಯಾಸಂಘದ ಬಗ್ಗೆ ಟೀಕೆ ಬಂದಾಗ ಇದನ್ನು ನೇರವಾಗಿ ರಮೇಶ್‌ರವರಲ್ಲಿ ವಿರೋಧಿಸಿ ಈ ರೀತಿ ಸಮಾಜದ ಬಗ್ಗೆ ಬರೆಯುವುದು ತರವಲ್ಲ ಬದಲಾಗಿ ನೇರವಾಗಿ ಅಧ್ಯಕ್ಷರಿಗೆ ಪತ್ರ ಬರೆದಿದ್ದರೆ ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಿದ್ದರು. ಅಥವಾ ನಿಮ್ಮ ಸಲಹೆಯನ್ನು ಚರ್ಚಿಸುತ್ತಿದ್ದರು. ಇದಕ್ಕೆ ನಿಮಗೆ ಸೂಕ್ತ ಉತ್ತರವೂ ಸಹ ಲಭಿಸುತ್ತಿತ್ತು. ಎಂಬುದಾಗಿ ತನ್ನ ವಿರೋಧವನ್ನು ವ್ಯಕ್ತಪಡಿಸಿದ್ದೆ.

ಆದರೆ 15–8–98ರಂದು ನಡೆದ ಧ್ವಜಾರೋಹಣಕ್ಕೆ ಆಮಂತ್ರಣ ಬರದಿದ್ದುದ್ದಕ್ಕೆ ನನಗೆ ತುಂಬಾ ಬೇಸರವಾಗಿದೆ. ಅಧ್ಯಕ್ಷರ ಬೇಜವಾಬ್ದಾರಿ ವರ್ತನೆ ಸರಿಯಲ್ಲವೆಂದು ತಿಳಿದು, ವಿದ್ಯಾಸಂಘದ ಬಗ್ಗೆ ಪತ್ರಿಕೆಯಲ್ಲಿ ಬಂದ ಟೀಕೆಯನ್ನು ವಿರೋಧಿಸಿದ್ದು ತಪ್ಪೆಂದು ನನಗೆ ತಿಳಿಯಿತು. ಇವರ ಈ ರೀತಿಯ ಬೇಜವಾಬ್ದಾರಿಯುತ ಆಡಳಿತ ಇಂದಿಗೆ ಕೊನೆಗೊಂಡು ಇನ್ನು ಮುಂದೆ ಬರುವ ಯಾವುದೇ ಸಮಾರಂಭಕ್ಕೆ ಸರ್ವ ಜನಾಂಗದವರನ್ನು ಗಣನೆಗೆ ತೆಗೆದುಕೊಳ್ಳಲಿ, ಇಲ್ಲವೇ ಜನಾಂಗವನ್ನು ಒಂದೇ ವೇದಿಕೆಗೆ ಕರೆತಂದು ನಾವೆಲ್ಲಾ ಒಂದೆನ್ನುವ ಮನವರಿಕೆ ಮಾಡಲೆಂದು ಕಳಕಳಿಯ ಮನವಿಯನ್ನು ಜನಾಂಗದ ಪರವಾಗಿ ಇಡುತ್ತಿದ್ದೇನೆ.

❀ ತಡಿಯಪ್ಪನ ಕುಮಾರಜಯ,
ಮೈಸೂರು.

ಕಚಗುಳಿ

ರಾಮು : ಡಾಕ್ಟರ್‌ನ ಮೂರು ರೀತಿ ನೋಡ್ತಾರೆ ಈ ಜನ

ಭೀಮು : 'ಅದು ಹೇಗೆ ಸಾಧ್ಯ ?'

ರಾಮು : 'ಆಪರೇಷನ್‌ಗೆ ಮೊದಲು ದೇವರ ಹಾಗೆ, ಹೊಲಿಗೆ ಬಿಚ್ಚುವಾಗ ದನದ ಹಾಗೆ, ಬಿಲ್ಲ್ ಕೊಡುವಾಗ ದೆವ್ವದ ಹಾಗೆ.

❀ ವಿ. ಪವನ್, ಮೈಸೂರು.

ಕೊಡಗಿನ ಸಿರಿ

ನಮ್ಮ ಕೊಡಗಿದು ನಮ್ಮದು
ಬಲು ಹೆಮ್ಮೆಯ ನೆಲ ಜನ್ಮದು
ಲೋಕ ಪ್ರಿಯ ಅಗಸ್ತ್ಯ ಋಷಿಯು
ನೆಲಸಿದ ತಾಣ ನಮ್ಮದು.
॥ ನಮ್ಮ ಕೊಡಗಿದು ॥

ಹಚ್ಚ ಹಸಿರಿನ ಸೀರೆಯುಟ್ಟ
ಪ್ರಕೃತಿ ಮಾತೆಯ ಮಡಿಲೊಳು
ಸಿರಿ ದೇವಿಯ ಹರಳಿನಂತೆ
ಹುಟ್ಟಿ ಹರಿವಳು ಕಾವೇರಿ.
॥ ನಮ್ಮ ಕೊಡಗಿದು ॥

ಏಲಕ್ಕಿ, ಕಾಫಿ, ಕರಿಮೆಣಸು, ಕಿತ್ತಳೆ
ಹಣದ ಹೊಳೆಯೇ ಹರಿವುದು
ನಾಟ ನೆಡುವೆವು ಭತ್ತ ಬೆಳೆವೆವು
ನಾಡ ಹಬ್ಬ, ಹುತ್ತರಿ ಮೆರೆವೆವು.
॥ ನಮ್ಮ ಕೊಡಗಿದು ॥

ಬೆಟ್ಟ ಗುಡ್ಡಗಳ ಸುಂದರ ನಾಡಿದು
ಕಷ್ಟ ಜೀವಿಗಳು ಜೀವಿಪ ಬೀಡಿದು
ಜೇನ ಹೊಳೆಯೇ ಹಂವುದಿಲ್ಲಿ
ಶ್ರೀ ಗಂಧ ತುಂಬಿದ ಗುಡಿಯಿಲ್ಲಿ.
॥ ನಮ್ಮ ಕೊಡಗಿದು ॥

ನಯನ ಮನೋಹರ ವೀರ ಮಾತೆಯರು
ಶೂರ ಪುತ್ರರ ಜನ್ಮಿಸಿದಾ ನೆಲ
ದೇಶ ಕಾಯುವ ಪಣವನು ತೊಟ್ಟ
ಧೀರ ಯೋಧರ ರಕ್ಷಣಾ ಬಲ.
॥ ನಮ್ಮ ಕೊಡಗಿದು ॥

ಬೆಡಗಿನಾ ಸಿರಿ ಚೆಲುವಿನಾ ಖನಿ
ಕೊಡಗು ಮಕ್ಕಳ ಮಾತೆ ನೀ
ಕನ್ನಡ ತಾಯಿಯ ಪುಟ್ಟ ಮಗಳು ನೀ
ಭಾರತಾಂಬೆಯ ಮೊಮ್ಮಗಳು ನೀ.
॥ ನಮ್ಮ ಕೊಡಗಿದು ॥

ಎಷ್ಟು ಜನ್ಮದ ಪುಣ್ಯದ ಫಲವೋ
ನಿನ್ನ ಗರ್ಭದಲಿ ಉದಿಸಿ ಬಂದೆವು
ಏನೇ ಬರಲಿ ಮುಡಿಪಾಗಿಡುವೆವು ಜೀವ
ನಿನ್ನ ಸೇವೆಗೆ ಕೊನೆ ಉಸಿರಿರುವರೆಗೆ.
॥ ನಮ್ಮ ಕೊಡಗಿದು ॥

ಬಿಟ್ಟೀರ ಚೋಂದಮ್ಮ ಶಂಭು, ಬೆಂಗಳೂರು.

ಅಬ್ಬಿ ಜಲಪಾತ

ಕೊಡಗಿನಲ್ಲಿ ಹರಿಯುತ್ತಿದೆ ಈ ನಮ್ಮ ಅಬ್ಬಿ
ಬನ್ನಿರಯ್ಯ ನೋಡಲು ಮನತುಂಬಾ ಹಿಗ್ಗಿ ॥
ಕುಣಿಯುತ್ತಿದೆ ನಲಿಯುತ್ತಿದೆ ಈ ನಮ್ಮ ಅಬ್ಬಿ
ಹರಿಯುತ್ತಿದೆ ಜರಜರನೆ ಊರೆಲ್ಲ ಹಬ್ಬಿ ॥

ಹೋದೆನು ಮಳೆದಿನ ಮನತುಂಬಾ ಹಿಗ್ಗಿ
ನೋಡಿದೆನು ಆ ತಾಯಿ ಬರವ ತಗ್ಗಿ, ಬಗ್ಗಿ ॥
ಕಾಡೊಳಗೆ ಹರಿಯುವಳು ನಿಶ್ಚಿಂತೆಯಿಂದ
ಬೋರ್ಗರೆದು ಬೀಳುವಳು ಆ ಬೆಟ್ಟದಿಂದ ॥
ಮಡಿಕೇರಿಯಲ್ಲಿ ಹರಿಯುತ್ತಿದೆ ಈ ನಮ್ಮ ಅಬ್ಬಿ
ಬನ್ನಿರಯ್ಯ ನೋಡಲು ಮನತುಂಬಾ ಹಿಗ್ಗಿ ॥

○ **ಬಿಟ್ಟೀರ ನೈನಿ ರಾಮಯ್ಯ, ಮಡಿಕೇರಿ.**

ಆ ಸೆ ಗ ಳು

ಆಸೆಗಳು ಸಾವಿರಾರು
ಫಲಿಸುವವು ನೂರಾರು
ವಕೀಲನಾಗಬೇಕೆಂಬ ಆಸೆ
ಆಗಿದ್ದು ಮಾತ್ರ ಸರ್ಕಾರಿ ಗುಮಾಸ್ತೆ
ಬ್ರಹ್ಮಚಾರಿಯಾಗಬೇಕೆಂಬ ಆಸೆ
ಕತ್ತಿಗೆ ಬಿತ್ತು ಗಂಡ ಮಕ್ಕಳ ವರಸೆ
ವಿದೇಶಕ್ಕೆ ಹೋಗಬೇಕೆಂಬ ಆಸೆ
ವರ್ಗಾಯಿಸಿದರು ನನ್ನ ಊರಿಂದಾಚೆ
ಮಂತ್ರಿಯಾಗಬೇಕೆಂಬ ಆಸೆ
ಜನಗಳ ಓಟು ಸಿಗದೆ ನನಗಾದದ್ದು ನಿರಾಸೆ

ಕಾನೆಹಿತ್ಲು ನಳಿನಿ ನಂಜಪ್ಪ,
ಕುಶಾಲನಗರ.

ನ ಗೆ ಹ ನಿ

ಹೆಂಡತಿ : ಕೆಲಸದವಳು ಬರಲಿಲ್ಲ ಅಂದರೆ ನನ್ನ ತಲೆನೇ ಓಡೊಲ್ಲ ಕಣ್ರಿ, ಇವತ್ತು ತಪ್ಪಿಸಿಕೊಂಡಿದ್ದಾಳೆ. ಗಂಡನ ಬಳಿ ಹೇಳಿದಳು.

ಗಂಡ : 'ಹೌದು ಕಣೆ, ನನಗೂ ಮನಸ್ಸೇ ಓಡೊಲ್ಲ' ಗಂಡ ಖಿನ್ನನಾಗಿ ನುಡಿದ.

ವಿಜಯ್, ಮೈಸೂರು.

ನಿಮ್ಮ ಪತ್ರಗಳು

ಸಂಸ್ಕೃತಿ ಎಂದರೇನು ?

ಮಾನ್ಯರೇ,

ನಮ್ಮ ಕೊಡಗು ಸಂಗಾತಿ ಸಂಚಿಕೆ 15, ಆಗಸ್ಟ್ 1ರಿಂದ 15, 1998 ರಲ್ಲಿ ಮಾನ್ಯ ಶ್ರೀ ಬೈತಡ್ಕ ಬೆಳ್ಯಪ್ಪ ಮಡಿಕೇರಿ ಇವರು ಬರೆದ 'ಕೊಡಗು ಗೌಡ ಸಂಸ್ಕೃತಿ ಅಳಿಯುವ ಅಂಚಿನಲ್ಲಿದೆಯೇ' ? ಎಂಬ ಬರಹಕ್ಕೆ ಧನ್ಯವಾದಗಳು. ಇಂತಾ ಚಿಂತಕರು ಬೇಕು. ಪುಟ 7ರಲ್ಲಿ 3ನೇ ಕಾಲಂನಲ್ಲಿ ಅವರು 'ಯಾವ ಸಂದರ್ಭದಲ್ಲಿ ಯಾವ ಉಡುಪನ್ನು ಧರಿಸಬೇಕೆಂಬುದೇ ಸಂಸ್ಕೃತಿ' ಎಂದು ಬರೆದಿರುವರು. ಇದು ಸಮಂಜಸವಲ್ಲ. ಅದು ಬರೀ ಸಂಪ್ರದಾಯ. ಸಂಸ್ಕೃತಿ ಬೇರೆ ಸಂಪ್ರದಾಯ ಬೇರೆ. ಸಂಸ್ಕೃತಿಯಿಂದ ಬಂದದ್ದು ಸಂಪ್ರದಾಯ.

ಸಂಸ್ಕೃತಿ ಎಂದರೇನು? ನಮ್ಮ ಜನನವೇ ಒಂದು ಸಂಸ್ಕೃತಿಯಲ್ಲಿ ಬಂದಿರುವುದು. ಇಂಗ್ಲಿಷ್‌ನಲ್ಲಿ Culture, ಸಂಸ್ಕೃತದಲ್ಲಿ ಸಂಸ್ಕೃತಿ.

ಸಂಸ್ಕೃತಿ ಎಂದರೆ ನಾವು ನಮ್ಮ ಜೀವನದಲ್ಲಿ ನಿತ್ಯ ಆಚರಿಸಬೇಕಾದ ನಿಯಮ, ನಮ್ಮ ಜೀವನ ರೀತಿ. ರೀತಿಯಲ್ಲಿರುವ ನೀತಿ. ಉದಾಹರಣೆ : ಅತಿಥಿ ಸತ್ಕಾರ, ಕಾಲು ತೊಳೆಯಲು ನೀರು ಕೊಡುವುದು, ಕಾಲು ಮುಟ್ಟಿ ನಮಸ್ಕರಿಸುವುದು, ಮನೆಯಲ್ಲಿ ಮಣ್ಣಿನ ದೀಪವನ್ನು ದೇವರ ಕೋಣೆಯಲ್ಲಿ ಹಚ್ಚಿಸುವುದು, ಅದಕ್ಕೆ ಕೈಮುಗಿದು ಆಶೀರ್ವಾದ ಪಡೆಯುವುದು, ಮನೆಯವರಲ್ಲಿ ಸೌಹಾರ್ಧತೆಯಿಂದ ಬಾಳುವುದು, ಪ್ರೀತಿಯನ್ನು ಹಂಚಿಕೊಳ್ಳುವುದು,ಹಣೆಗೆ ವಿಭೂತಿ, ಕುಂಕುಮ ಗಂಧಧಾರಣೆ, ದೈವಪ್ರೀತಿ, ಪಾಪಭೀತಿ, ಸಂಘ ನೀತಿ—ಇದು ಸಂಸ್ಕೃತಿ.

ತಲೆಗೆ ರುಮಾಲು, ಗೇಂಟಿ ಸೀರೆ, ಉಡಿಗೆ ತೊಡಿಗೆಗಳು ಸಂಸ್ಕೃತಿಯಲ್ಲಿ ಅವು ಸಂಪ್ರದಾಯಗಳು. ಸಂಪ್ರದಾಯ ಬರುವುದು ಸಂಸ್ಕೃತಿಯಿಂದ.

ನಮ್ಮ ಪೂಜೆ, ಹಿರಿಯರನ್ನು ಸತ್ಕರಿಸುವ ಆಚಾರ, ಪ್ರೀತಿ, ತ್ಯಾಗದಿಂದ ಸಂಘಜೀವನ, ಸದ್ಭಾವನೆ ಇದೆಯೋ ಅಲ್ಲಿ ದಿವ್ಯತ್ವ ಇದೆ. ದಿವ್ಯತ್ವವಿರುವಲ್ಲಿ ಧರ್ಮ ಇದೆ. ಧರ್ಮ ವಿರುವಲ್ಲಿ ಸಂಸ್ಕೃತಿ ಇದೆ.

ಸಂಸ್ಕೃತಿ ಇಲ್ಲದವನು ಎಂದರೆ ಅಯೋಗ್ಯ ಎಂದು ಅರ್ಥ. ಆಯೋಗ್ಯನೂ ಸಂಪ್ರದಾಯದಲ್ಲಿರಬಹುದು. ಸಂಪ್ರದಾಯಕ್ಕಿಂತ ಸಂಸ್ಕೃತಿಗೆ ಹೆಚ್ಚಿನ ಮಹತ್ವ.

ನಮ್ಮ ಸಂಸ್ಕೃತಿ ಎಂದೂ ಅಳಿಯದು. ಅದಕ್ಕೆ ಇಂದು ನೋಡಕವಿದಿದೆ. ಹೆಚ್ಚು ವಿದ್ಯಾವಂತರು, ಹೆಚ್ಚು ಹಣ ಸಂಪಾದಿಸಿರುವವರು ಸಂಸ್ಕೃತಿಯನ್ನು ಹಿಯ್ಯಾಳಿಸಬಹುದು. ಆದರೆ ಪುಣ್ಯಕಾರ್ಯದಲ್ಲಿ ಸಂಸ್ಕೃತಿಯಿಂದ ನಡಿಯಲೇಬೇಕು. ಸಂಸ್ಕೃತಿ ಹಾಳಾಗುವುದು ವಿದ್ಯಾವಂತರಿಂದ, ಅರ್ಥದಲ್ಲಿ ಹಣ ಸಂಪಾದಿಸಿರುವವರಿಂದ. ಅಂತವರನ್ನು ಸಮಾಜ ಶುಭ ಸಂದರ್ಭದಲ್ಲಿ ತಿರಸ್ಕರಿಸಲೇಬೇಕು. ಆ ಧೈರ್ಯ ಸಮಾಜಕ್ಕಿದೆಯೇ ? ನಾವು ಇಂದು ನಾಗರೀಕರಣ ಎನ್ನುತ್ತೇವೆ. ದುರಾದೃಷ್ಟ ನಾವು ನಗರೀಕತೆಯನ್ನು ನಾಗರೀಕತೆ ಎಂದು ಭ್ರಮಿಸಿದ್ದೇವೆ. ಈ ಭ್ರಮೆ ಹೋಗಬೇಕು. ಹಿರಿಯರ ದಿವ್ಯ ಮಾರ್ಗದರ್ಶನದ ಕೊರತೆ ಇದೆ. ಮಾರ್ಗದರ್ಶನವೆಂದರೇನೆಂದು ಹಿರಿಯರಿಗೆ ಗೊತ್ತಿಲ್ಲ. ಹಾಗಾಗಿ ಅವರಿಂದ ಸುಧಾರಣೆ ಕಠಿಣ.

ನಮ್ಮನ್ನು ನಾವು ಸಂಸ್ಕರಿಸಿಕೊಂಡರೆ ಸಂಸ್ಕೃತಿ ಉಳಿಯುತ್ತದೆ. ಇನ್ನೊಬ್ಬರಿಗೆ ಬೆರಳು ತೋರಿಸುವುದು ಬೇಡ. ನಮ್ಮನ್ನು ನಾವು ಸಂಸ್ಕರಿಸಿಕೊಳ್ಳುವ. ಇದೇ ಸಂಸ್ಕೃತಿ ಉಳಿಕೆಗೆ ಏಕೈಕ ಮಾರ್ಗ.

○ ಚೇಂದ್ರಿಮಾಡ ಗ. ಮುತ್ತಪ್ಪ,
ಕುಶಾಲನಗರ.

ಜಾತಿ ಮತಗಳ ಸೌಹಾರ್ಧತೆ

ಮಾನ್ಯರೇ,

ನೀವು ಹೊರಡಿಸಿದ ಆಗಸ್ಟ್ 1–ರಿಂದ 15ರ ಪತ್ರಿಕೆಯಲ್ಲಿ ಚೇಂದ್ರಿಮಾಡ ಮುತ್ತಪ್ಪನವರ ವಿಷಯದಲ್ಲಿ ಪ್ರಕಟಿಸಿದ ಲೇಖನವನ್ನು ಓದಿ ಬಹಳ ಸಂತೋಷವಾಯಿತು. ಶ್ರೀ ಚೇಂದ್ರಿಮಾಡ ಮುತ್ತಪ್ಪನವರಂತಹ ವ್ಯಕ್ತಿಗಳು ಬಹಳ ವಿರಳ. ಅಂತಹ ವ್ಯಕ್ತಿಗಳು ಇನ್ನು ಹತ್ತಾರು ಜನರು ಹುಟ್ಟಿದರೆ ಈಗಾಗಲೆ ಚೆನ್ನಾಗಿಯೇ ಇರುವ ಜಾತಿಯ ಸೌಹಾರ್ಧತೆ ಕೊಡಗಿನಲ್ಲಿ ಮಾತ್ರವಲ್ಲ, ಕರ್ನಾಟಕ ಹಾಗೂ ಭಾರತದಲ್ಲಿ ಜಾತಿ ಮತಗಳ ಸೌಹಾರ್ಧತೆ ಹೆಚ್ಚಿ ನಮ್ಮ ನಾಡು, ನಮ್ಮ ರಾಜ್ಯ ಹಾಗೂ ನಮ್ಮ ರಾಷ್ಟ್ರವು ಒಂದು ನಂದನ ವನವಾಗಿ ಪರಿವರ್ತಿಸುವುದರಲ್ಲಿ ಯಾವ ಸಂದೇಹ ಇಲ್ಲ, ಶ್ರೀ ಮುತ್ತಪ್ಪನವರಿಗೆ ಆರೋಗ್ಯ ಐಶ್ವರ್ಯವನ್ನು ಭಗವಂತನು ಕರುಣಿಸಿ ಅವರಿಂದ ಕೊಡಗಿಗೇ ಅಲ್ಲ ಕರ್ನಾಟಕ ಹಾಗೂ ಭಾರತಕ್ಕೆ ಸೇವೆ ಸಲ್ಲಲಿ ಎಂದು ಹಾರೈಸುತ್ತೇನೆ.

○ ಪ್ರೊ|| ಪೂಜಾರಿ ಮೊಣ್ಣಪ್ಪ,
ಬೆಂಗಳೂರು.

ಅರೆಭಾಷಿಕ ವಿಭಾಗ

ಧಾರವಾಹಿ-11

ಮೂಲಕಥೆ : ಅಶ್ವಥಿ ಅರವಿಂದ್
ಅರೆಭಾಷೆಗೆ : ಎಂ.ಇ. ಮುಹಮ್ಮದ್

ಕರಿ ಚಿನ್ನ

ಕಳ್ದ ಸಂಚಿಕೆಂದ............

ಫ್ಯಾಕ್ಟ ಮಾದಯ್ಯ ಗೌರನ ಅವ್ರ ಮನೆಗೆ ಬುಟ್ಟ್ ರಂಜನ್‌ಗೆ ಬುದ್ಧಿ ಕಲ್ಸಿನೆತೇಳಿ ಸೀದ ಬೋರುಗುಡ್ಡೆ ದೇವಯ್ಯನ ಮನೆಗೆ ಹೋದೆ. ಸರಿ ನಡುರಾತ್ರಿ ಯಾದ್ರೂ ದೇವಯ್ಯ ಅವನ ಕಳ್ಳ ಲೆಕ್ಕನ ಬರೀತಾ ಇತ್ತ್. ಮಾದಯ್ಯ ದೇವಯ್ಯನ ಹತ್ರ ನಿಮ್ಮ ಮಣ ರಂಜನ್ ಗೌರನ ಕೆಡ್ಸಿಬುಟ್ಟಿಟು. ಅದ್ಕೆ ನಾನ್ ಏನಾರೊಂದು ವ್ಯವಸ್ಥೆ ಮಾಡೊನೋತೇಳಿ ಇಲ್ಲಿಗೆ ಬಂದೆತೇಳ್ದೆ. ಆಗ ಮಾದಯ್ಯಂಗೂ ಮತ್ತ ದೇವಯ್ಯಂಗೂ ಮಾತ್‌ಗೆ ಮಾತ್ ನಡ್ದದೆ.

ಮುಂದೆ ಓದಿ............

'ನಮ್ಮ ರಂಜು ಆ ಗೂಡೆಗೆ ಮೋಸ ಮಾಡಿರೊದ್ಂತ ಅಲ್ಲಿದೆ. ಮಾದಯ್ಯ ಸುಳ್ಳ್ ಹೇಳಿಕಿಲೆ.'

ಮುತ್ತಕ್ಕಿ ಹೇಳ್ತ್.

'ನಿಜ ಆದ್ರೆ ಈಗ ಎಂತ ಮಾಡೊಳು ? ರಂಜುಗೆ ಅವಳ್ನ ಮೊದ್ವೆ ಮಾಡಕೂಂತ ನಿನ್ನ ಅಭಿಪ್ರಾಯನಾ ?'

ಬೋರುಗುಡ್ಡೆ ದೇವಯ್ಯ ಸಿಟ್ಟ್‌ಲಿ ಹಾರಿ ಬೀತ್.

'ಒಂದ್ ಗೂಡೆನ ಹಾಳ್ ಮಾಡ್ದವನೇ ಅವಳ್ನ ಮೊದ್ವೆ ಮಾಡಿಕಂಬೊದು ನ್ಯಾಯ, ಧರ್ಮ. ಅದೂ ನಮ್ಮ ಮನೆ ಹತ್ರದ ಗೂಡೆ. ಆ ಗೌರ ನಡಿಯುಕೆ ಕಲಿಯುಕಾಕನೆ ನಮ್ಮ ರಂಜನ್‌ಗೆ ಒಳ್ಳೆ ಪರಿಚಯ ಉಟ್ಟ್. ಒಳ್ಳೆ ಬುದ್ಧಿವಂತ ಗೂಡೆ. ಅಂವ ಅವ್ಳಿಗೆ ಮಾತ್ ಕೊಟ್ಟ್ ಮೋಸ ಮಾಡಿಕೂ ಸಾಕ್. ನೊಂದ ಗೂಡೆದ್ ಕಣ್ಣೀರ್ ಶಾಪ ಮುಟ್ಟ್ಕರೆ ಮತ್ತೆ ನಾವು ತಲೆ ಎತ್ತದಂಗೆ ಆಗಿ ಹೋಕೂ ಸಾಕ್. ನಾಡ್‌ಕೂಲ್ಲಿ ಮಾದಪ್ಪಂಗೆ ಬೇಕಸ್ಟ್ ಹಣ ಇಲ್ದೇ ಹೋದ್ರೂ ಅವು ಉಪಾಸ ಬೀಳ್‌ದೆ ದಿನ ಕಳಿತಾ ಹೋಗ್ತಾ ಒಳೊ. ರಂಜುಗೆ ನಾವು ಡೌರಿ ತಕಣದೇ ಹೋದ್ರೂ ನಾವ್ಗೆ ನಷ್ಟ ಒಂದೂ ಆಕಿಲ್ಲೆ. ನೀವ್ ರಂಜುಗೆ ಹೇಳಿ, ಆ ಗೂಡೆನ ಮೊದ್ವೆ ಮಾಡಿಕಣಿಕೆ.'

ಮುತ್ತಕ್ಕಿ ಹೇಳ್ತ್

'ಕಾಲ್ ಮೊಡ್‌ಟಿ ಬುಟ್ಟ್ ಒಂದ್ ಒದ್ದರೆ ಉಟ್ಟಲ್ಲ'

ಬೋರ್‌ಗುಡ್ಡೆ ದೇವಯ್ಯ ಹೆಣ್ಣ್‌ಗೆ ಒದಿಯಕೆ ಹತ್ರ ಹೋತ್, ಮುತ್ತಕ್ಕಿ ಒಳಗೆ ಹೋತ್.

* * *

ನನ್ನ ಮಣ ರಂಜನ್ ಯಾರ್ನ ಮೊದ್ವೆ ಮಾಡ್ಕಣಕೂಂತೇಳುದರ್ನ ನಾನ್ ತೀರ್ಮಾನ ಮಾಡ್ನೆ. ಆ ವಿಷಯಲಿ ನೀವ್ಯಾರೂ ತಲೆ ಹಾಕುದು ಬೇಡ ಹೇಳಿತ್‌ಲೇಂತ ಬೇಡ, ನನ್ನ ರಂಜುನ ಮಾಂವ ಆಗೊಂವ ಒಬ್ಬ ಮುಖ್ಯ ಮಂತ್ರಿಯೋ ಆಗಿರೊಕೂಂತ ನನ್ನ ಆಸೆ. ಹೋಗಲಿ ಒಂದ್ ಕ್ಯಾಬಿನೆಟ್ ಮಂತ್ರಿದ್ ಮಗಳ್ನಾದ್ರೂ ತರೊಕುತ. ನಾನ್ ಒಳೆ.'

'ಮಂತ್ರಿದ್ ಮಗಳ್ ಸಿಕ್ಕದೆ ಹೋದ್ರೆ ಎಂತ ಮಾಡ್ರೆ ಮುತ್ತಕ್ಕಿ ಕೇಳ್ತ್

'ಸಿಕ್ಕದೆ ಹೋದ್ರೆ ಒಂದು ಐ ಎ ಎಸ್. ಆಫೀಸರ್ದ್ ಮಗಳಾದ್ರೂ ಆಕು. ನಿನ್ನ ಮಾತ್ ಕೇಳ್‌ಕಂಡ್ ಆ ಬಡವನ ಮಗಳ್ನ ತಾಕೆ ನಂಗೆ ಹುಚ್ಚ್ ಹಿಡ್‌ತ್‌ಲೆ. ಗೊತ್ತಾತ ?'

ದೇವಯ್ಯ ಗತ್ತ್‌ಲಿ ಮೀಸೆಗೆ ಕೈ ಹಾಕ್ಯಂಡ್ ಹೇಳ್ತ್.

'ಆಹಾ ಕಾಲೇಜ್ ಮೆಟ್ಲ್ ಹತ್ತದ ನಿಮ್ಮ ಮಣನ ಮಂತ್ರಿದ್ ಮಗಳು ಮೊದ್ವೆ ಮಾಡಿಕಣಿಕೆ ಪಾರ ಕಾಯ್ತಾ ಉಟ್ಟ್'

ಮುತ್ತಕ್ಕಿ ಹುಂಗ್ಸುವ ಹಂಗೆ ಹೇಳ್ತ್.

'ಅಂವ ಕಾಲೇಜ್ ಮೆಟ್ಲ್ ಹತ್ತಿತ್ ಲೇಂತ ನಿಂಗೆ ಯಾರ್ ಹೇಳ್ದ್ ?

ದೇವಯ್ಯ ಕಣ್ಣ್ ಹೊರಳ್‌ಸ್ಯಂಡ್ ಕೇಳ್ತ್.

'ಯಾರ್ ಯಾರ್ ಯಾಕೆ ಹೇಳೊಕು, ನಾನ್ ಅವ್ನ ಹೆತ್ತವಳು ತಾನೆ ?'

'ಗೊತ್ತಿಲ್ಲದಿದ್ರೆ ಕೇಳಿ ತಿಳ್‌ಕಣಕು. ನಮ್ಮ ರಂಜು ತ್ರಿಬಲ್ ಎಂ. ಎ. ಮಾಡಿಟ್ಟ್.'

ದೇವಯ್ಯ ತನ್ನ ಮೂರ್ ಬೆರಳ್‌ನ ತೋರ್ಸಿತ್.

ಬೇಕಾದ ಡಿಗ್ರಿ ಸರ್ಟಿಫಿಕೇಟ್‌ನ ಮಾರುವ ಒಂದ್ ದೊಡ್ಡ ಸಿಟಿ ಉಟ್ಟ್‌ಗಡ. ಯೂನಿವರ್ಸಿಟಿಲಿ ಹತ್ತ್‌ಸಾವ್‌ರ ಕೊಟ್ರೆ ಬಿ. ಎ. ಸರ್ಟಿಫಿಕೇಟ್‌ಗ ಸಿಕ್ಕದೆ. ನಮ್ಮ ರಂಜುಗೆ ತ್ರಿಬಲ್ ಎಂ.ಎ. ಸರ್ಟಿಫಿಕೇಟ್ ತೆಗ್ದನೆ ನೋಡ್ತಾ ಇರ್. ಮತ್ತೆ ಆ ಸರ್ಟಿಫಿಕೇಟ್‌ನ ಮಂತ್ರಿದ್ ಮಗಳ ಮುಂದೆ ಎಸ್ದನೆ. ಎಜುಕೇಶನ್ ಮಿನಿಸ್ಟರ್ ಸಹ ಅದರ್ನ ಒಪ್ಪಿಕಣಕು. ಆಗ ಅಪ್ಪನೂ ಮಗಳೂ ನನ್ನ ರಂಜುಗಾಗಿ ಕುಣಿತಾ ಬರೊಕು. ನೀನ್ ಎತ್‌ಗೆ ಹಾಯುಕೆ ಕಲ್ಸು ದೇನೂ ಬೇಡ. ಸೊಲ್ಪ ಬಾಯಿ

ಮುಚ್ಚಿಂಡ್ ಕುದ್ದ್‌ಕ.'

ಅಷ್ಟ್ ಹೇಳ್ದ ದೇವಯ್ಯ ಹೋಗಿ ಮಲಗಿತ್.

ಎಂತ ಪೇಳೊಕೂಂತ ಗೊತ್ತಾಗದ ಮುತ್ತಕಿ ದವಡೆಗೆ ಕೈ ಕೊಟ್ಟ್‌ಕಂಡ್ ಗಂಡನ ನೋಡಿಕಂಡ್ ಕುದ್ದತ್.

* * *

ಹೊಟೇಲ್ ತ್ರಿವೇಣಿಲಿ 115ನೇ ರೂಮ್‌ಲಿ ಮಲ್ಕಂಡಿದ್ದ ರಂಜನ್‌ಗೆ ಎಚ್ಚರ ಆಗೋ ಹೊತ್ತ್‌ಗೆ ಸೂರ್ಯ ಉದಯಿಸಿತ್ತ್. ಸುಂದರಿ ಗೂಡೆಗ ಮತ್ತೆ ಎಕ್ಸ್‌ಪೋರ್ಟ್ ಕ್ವಾಲಿಟಿ ಬ್ರಾಂದಿ ಅವಂಗೆ ರಾತ್ರಿ ಸ್ವರ್ಗ ಸುಖ ಕೊಟ್ಟಿತ್ತ್. ಹಂಗಾಗಿ ಅವಂಗೆ ಬೆಳಿಗ್ಗೆ ಬೇಗ ಎಚ್ಚರ ಆತ್ಲೆ. ಮಲಗಿದಲ್ಲೇ ಅಂವ ಒಮ್ಮೆ ಹಾಸ್ಗೆನ ನೋಡ್ತ್. ಮುದ್ದೆ ಆಗಿ ಬಿದ್ದಿದ್ದ ಹೂ, ಹೇರ್‌ಪಿನ್, ಒಂದ್ ಸಣ್ಣ ಕೈಚೋಕ, ಅದರ ಮ್ಯಾಲಿತ್ತ್. ಅವನ ತುಟಿಲ್ಲಿ ಒಂದ್ ಸಣ್ಣ ನಗೆ ಬಾತ್. ರಾತ್ರಿ ಸಿಕ್ಕಿದ ಜೊತೆಗಾರ್ತಿ ಪರ್ವಾಗಿಲ್ಲೇಂತ ಆತ್ ಅವಂಗೆ. ಅವಳ ಹೆಸರ್ ಕೇಳಿಕೊ ಸಂದರ್ಭ ಸಿಕ್ಕಿತ್‌ಲೆ.

ರಂಜನ್ ಏನೋ ಗ್ಯಾನ ಮಾಡಿಕಂಡ್ ಜಡಬಡಾಂತ ಎದ್ದತ್. ಜೊತೆಗಾರನ ಮದ್ವೆಗೆ ಹೋಗಿ ಬನ್ನೇಂತ ಸುಳ್ಳು ಹೇಳಿ ಮನೆಂದ ಹೊರಟ್ ಅಂವ ಜೀಪ್ ತಗಂಡ್ ಬಂದಿತ್ತ್. ತಡ ಆದ್ರೆ ಡ್ಯಾಡಿದ್ ಬೈಗಳ ಕೇಳೊಕಲ್ಲ, ಅಂವ ಬ್ಯಾಗ ಮಿಯ್ದ್ ಹೊರಟಿತ್. ಅದರ ಮಧ್ಯೆ ಒಮ್ಮೆ ಕನ್ನಡಿ ನೋಡೊಕೂಂತ ಆತ್. ಕನ್ನಡಿ ನೋಡ್ಕಂಡ್ ಒಮ್ಮೆ ಗೊಳ್ಳ್ ಅಂತ ಬೆಗಾಡ್‌ಕಾಕನ ಯಾರೋ ಬಾಗ್ಲ್ ತಟ್ಟಿದ ಸದ್ದ್ ಕೇಳ್ತ್.

'ಡೋರ್‌ನ ಬಡ್ದ್ ಮುರಿಬಡಿಪ್ಪಾ, ಅಲ್ಲಿ ಕಾಲಿಂಗ್ ಬೆಲ್ಲುಟ್ಟ್.'

ಕೇಳಿಕಂಡೇ ಅಂವ ಹೋಗಿ ಬಾಗ್ಲ್ ತೆ..ತ್.

'ಫ್ಯಾ...ಕ್ಟ.. ಮಾ...ದಯ್ಯ'

ರಂಜನ್ ತನ್ನನ್ ತಾನೇ ಹೇಳಿಕಂಡತ್

'ನಿಂಗೆ ಹೆಂಗೆ ಗೊತ್ತಾತ್ ಮಾರಾಯ ನಾನ್ ಇಲ್ಲಿ ಒಳೇಂತ ?' ಆಶ್ಚರ್ಯಂದ ಕೇಳ್ತ್ ರಂಜನ್

'ಬೋರ್‌ಗುಡ್ಡೆಲಿ ಬೇಕಸ್ಟ್ ಸುಂದರಿ ಗೂಡೆಗ ಇರ್‌ಕಾಕನ ಇದ್ ತಿಳ್‌ಕಣಿಕೆ ಕಷ್ಟ ಏನೂ ಇಲ್ಲೆಲ್ಲ'

ಕಠಿಣ ಮಾತ್‌ನ ತಮಾಷಿಲೇ ಹೇಳ್ತ್ ಫ್ಯಾಕ್ಟ್ ಮಾದಯ್ಯ.

ಬೆಳಿಗ್ಗೆ ಹೊತ್ತ್‌ಲಿ ಬಂದ್ ತಮಾಷೆ ಮಾತಾಡ್ತಾ ಒಳಲ್ಲ ?

ರಂಜನ್ ಕಾರ್ಯಕ್ಕೇ ಕೇಳ್ತ್.

ಅದಿರ್‍ಲಿ ಆ ಗೂಡೆ ಎಲ್ಲಿ ?'

'ಹ್ಞಂ, ಗೂಡೆನಾ ? ಯಾವ ಗೂಡೆ?'

ಒಂದೂ ಗೊತ್ತಿಲ್ಲದವರಂಗೆ ಅಂವ ಕೇಳ್ತ್.

'ನಾಡ್‌ಕೊಲ್ಲಿ ಮಾದಪ್ಪನ ಮಗಳು ಗೌರ.'

'ಅವಳು ಅವಳ ಮನೇಲಿ ಇದ್ದ್. ಓ... ಆ ವಿಷಯ ಹೇಳಿ ನನ್ನ ಹೆದ್ರಿಸಿಕೆ ಬಂದಿಯಾ ?'

'ನಾನ್ ಹೆದ್ರಿಸಿರೆ ನೀನ್ ಹೆದ್ರಿಯಾ ? ಬೋರುಗುಡ್ಡೆ ದೇವಯ್ಯನೂ ಅವನ ಮಕ್ಕಳೂ ಊರವರ್ನ ಹೆದ್ರಿಸಿಕೆ ಹುಟ್ಟಿದವು ತಾನೆ ? ಒಂದ್ ಗ್ಯಾನ ಇರ್‍ಲಿ! ಈ ಸರ್ತಿ ಅಪ್ಪ ಮಕ್ಕಳ್ನ ನಾವ್ ನೀರ್ ಕುಡ್ಸದೆ ಬುಡಕಿಲ್ಲೆ.'

'I say you get out'

ರಂಜನ್ ಕಿರ್ಚಿತ್.

ನೀನ್ ಇಂಗ್ಲಿಷ್‌ಲಿ ಬೊಗಳ್ಬೇನೂ ಬೇಡ. ಯು ಡೋಂಟ್ ನೋ ಹೂ ಆ್ಯಮ್ ಐ ? ಇಫ್ ಯು ರಿಪೀಟ್ ದೆಟ್ ನಾಟಿ ವರ್ಡ್ಸ್, ಐ ವಿಲ್ ಪುಲ್ ಯುವರ್ ಲಂಗ್ಸ್ ಔಟ್. ಬಿ ಕ್ಯಾರ್ ಫುಲ್, ಯು ಬ್ಲಡಿ ಬಾಸ್ಟರ್ಡ್.'

ಫ್ಯಾಕ್ಟ್ ಮಾದಯ್ಯ ಇಂಗ್ಲಿಷ್‌ಲೇ ಬುಟ್ಟ್ ರೂಂದ ಹೊರ್‍ಗೆ ಬಾತ್. ಮಾದಯ್ಯಂಗೆ ಸಿಟ್ಟ್ ಬಂದ್ ಬತ್ತ್.

ರಂಜನ್ ಹೊರ್‍ಗೆಂದ ರೂಮ್‌ನ ಬಾಗಿಲ್ ಹಾಕಿ ಬೋಲ್ಟ್ ಹಾಕಿತ್.

ಮಾದಯ್ಯನ ಲಾಯ್ಕಲಿ ಗೊತ್ತಿರೊ ರಂಜನ್ ಕೌಂಟರ್‌ಗೆ ಹೋಗಿ ಫೋನ್ ಮಾಡಿಕೆ ಪೇಚಾಡ್ಕನ ಮಾದಯ್ಯ ಅವನ ಮುಸುಡಿಗೆ ಒಂದ್ ಪೆಟ್ಟ್ ಕೊಟ್ಟತ್. ರಂಜನ್ ಮೊಗಚಿ ಬಿದ್ಬೋತ್. ಅವಂಗೆ ಅಲ್ಲಿ ಒಂದ್ ಖಾಲಿ ಬ್ರಾಂದಿ ಕುಪ್ಪಿ ಸಿಕ್ಕಿತ್. ಕುಪ್ಪಿನ ಮಾದಯ್ಯಂಗೆ ಬೀಸಿ ಹೊಡೆಕಾಕನ ಕರಾಟೆ ಪಟು ಮಾದಯ್ಯ ಸುಲಭಲಿ ತಪ್ಪಿಸ್ತ್. ರಂಜನ್‌ನ ಕೈಗಂಟೆಗೆ ಒಂದ್ ಕೊಟ್ಟತ್. ಖಾಲಿ ಕುಪ್ಪಿ ಬಿದ್ದ್ ಒಡ್‌ದ್ ಹೋತ್. ಅವನ ಅಡಿಗೆ ಮೊಗುಚಿಹಾಕಿ ಅವನ ಎದೆ ಮೇಲೆ ಕುದ್ದ್ ಕಂಡ್ ಮಾದಯ್ಯ ಅವನ ಡೊಂಡೆನ ಅಮುಕಿ ಹಿಡ್ತ್.

ರಂಜನ್‌ಗೆ ಉಸಿರಾಡಿಕೆ ಕಷ್ಟ ಆತ್.

[ಸಶೇಷ]

ನಗೆ ತುಣುಕು

ಮೌನ ಬಂಗಾರ

ಒಂದು ದಿನ ಸ್ಕೂಲ್‌ಲಿ ಮಾಸ್ಟ್ರ ಗಾದೆಗಳ ಬಗ್ಗೆ ಮಾತಾಡ್ತಾ, 'ಮಾತು ಬೆಳ್ಳಿ, ಮೌನ ಬಂಗಾರ' ಅಂತ ಹೇಳ್ದ್. ಇದರ್ನ ಮಕ್ಕ ಲಾಯಿಕ ಅರ್ಥ ಮಾಡಿಕಂಡಿದ್ದವೆ.

ಒಂದು ದಿನ ಮಾಸ್ಟ್ರ ಮಕ್ಕಳ ಹತ್ರ ಪ್ರಶ್ನೆ ಕೇಳ್ದ್, ಆಗ ಯಾವ ಮಕ್ಕ ಕೂಡಾ ಉತ್ರ ಹೇಳುದುಲೆ. ಆಗ ಮಾಸ್ಟ್ರ ಯಾಕೆ ಮಕ್ಕಳೆ ಸುಮ್ಮನೆ ಒಳರಿತಾ ಕೇಳ್ಕನ ಮಕ್ಕ ಹೇಳ್ದೊ ನಿವೇ ಹೇಳ್ದರಿ 'ಮೌನ ಬಂಗಾರ !'ತ ಅದರ್‌ಂದ ಸುಮ್ಮನೊಳೊತ ಹೇಳೊಕ !!!

○ ದೇವಿಪ್ರಸಾದ್ ಡಬ್ಲ್ಯು. ಜಿ.
ಮೂರ್ನಾಡು.

ನಿಜವಾದ ವಿದ್ಯೆ

ಒಂದು ಊರ್‌ಲಿ ಮೂರ್ ಜನ ಸಿನೇಹಿತರ್ ಇದ್ದೊ. ಒಂದು ದಿನ ಅವು ಮೂರ್ ಜನ ಒಂದ್‌ಕಡೆ ಕುದ್ದ್‌ಕಂಡ್ ಮಾತಾಡಿಕಂಡೊ. ನಾವ್ ಹಿಂಗೇ ದುಡಿತಾ ಇದ್ದರೆ ಆದುಲೆ, ನಾವು ಸನ ವಿದ್ಯೆ ಕಲಿಯಕುತಾ. ಹಿಂಗೆ ಹೇಳಿಕಂಡ್ ಅವು ಮೂರ್ ಜನ ಗುರ್‌ನ ಹುಡ್ಕಿಕಂಡ್ ಹೋದೊ. ಆಗ ಅಲ್ಲಿ ಒಂದು ಗುಡ್ಸಿಲ್‌ನ ಕಂಡೊ. ಅದರ ಮುಂದೆ ಒಂದು ದೊಡ್ಡ ಮರದ ಕೆಳ್ಗ ಕಾವಿ ಬಟ್ಟೆ ಹಾಕಿದ ಗುರ್‌ನ ಕಂಡೊ. ಅಡ್ಡ ಬಿದ್ದ್ ನಮಿಗೆ ವಿದ್ಯೆ ಕಲ್ಸಕುತಾ ಕೈ ಮುಕ್ಕಂಡ್ ಕೇಳಿಕಂಡೊ. ಆಗ ಗುರು ಎದ್ದ್ ಒಳಗೆ ಹೋಗಿ ಸ್ವಲ್ಪ ನೆಲಕಡ್ಲೆನ [ತೊಪ್ಪೆ ಸಮೇತ] ತಂದ್ ಒಬ್ಬೊಬ್ಬ್ರಂಗೆ ಒಂದೊಂದ್ ಹಿಡಿ ಕೊಟ್ಟ್ ಹೇಳ್ದೊ. ಇದರ ತಕಂಡ್ ನಿಮ್ಮ ಮನೆಗಳಿಗೆ ಹೋಗಿ ಇಟ್ಟ್ ಕಣಿ. ನಾನ್ ಸ್ವಲ್ಪ ದಿನ ಕಳ್ದ್ ಬನ್ನೆತೇಳಿ ದೇಶ ಸುತ್ತಿಕೆ ಹೋದೊ. ಇವು ಅವರವರ ಮನೆಗಳಿಗೆ ಬಂದೊ.

ಸ್ವಲ್ಪ ದಿನಲಿ ಬನ್ನೆಂತೇಳ್ದ ಗುರು ಒಂದೆರಡ್ ವರ್ಷ ಆದ ಮ್ಯಾಲೆ ಬಂದೊ. ಮೊದ್ಲನೆಯುವನ ಮನೆಗೆ ಹೋಗಿ ನೆಲಕಡ್ಲೆ ವಿಸಾರ್‌ಕ ಕೇಳ್ದೊ. ಆಗ ಅಂವ ಹೇಳ್ದೆ, ತುಂಬಾ ದಿನ ದಾರಿ ನೋಡ್ದೆ, ನೀವು ಬಾತ್ಲೆ. ನೆಲಕಡ್ಲೆ ಎಲ್ಲ ಹುಳ ಹಿಡ್‌ದ್ ಹಾಳಾತ್. ಅದರ ತಕಂಡ್ ಹೋಗಿ ಬಿಸಾಡ್‌ದೆತ. ಅಲ್ಲಿಂದ ಅವನ ಒಟ್ಟಿಗೆ ಕರ್ಕಂಡ್ ಎರಡನೆಯುವನ ಹತ್ರ ಹೋದೊ. ಅಲ್ಲಿಸನ ನೆಲಕಡ್ಲೆನ ಏನ್ ಮಾಡ್ದತ ಕೇಳ್ದೊ. ಅದ್ಕೆ ಅಂವ ಹೇಳ್ದೆ, ಸುಮಾರ್ ದಿನ ನೋಡ್ದೆ, ನೀವು ಬಾತ್ಲೆ ಇನ್ನ್ ಮಡ್ಗಿರೆ ಹುಳ ಹಿಡ್ದದೆತೇಳಿ ನಾನೇ ತಿಂದ್ ಬುಟ್ಟೆತಾ. ಅಲ್ಲಿಂದ ಇಬ್ಬರ್ನ ಕರ್ಕಂಡ್ ಮೂರ್ನೆಯುವ್ನ ಹತ್ರ ಹೋದೊ. ಅಲ್ಲಿಸನ ನೆಲಕಡ್ಲೆ ವಿಸಾರ್‌ತ ಕೇಳಿತಾಕನ ಅಂವ ನೆಗಾಡಿಕಂಡ್ ಒಳಗೆ ಹೋಗಿ ಒಂದು ಕುಕ್ಕೆ ತುಂಬ ನೆಲಕಡ್ಲೆನ ತಂದ್ ಗುರ್‌ಗಳ ಮುಂದೆ ಮಡ್‌ಗಿ ಹೇಳ್ತ್, ನೀವು ತುಂಬಾ ದಿನ ಬಾತ್‌ಲೆ ಅದರ್ನ ಇನ್ ಮಡ್‌ಗಿರೆ ಹಾಳಾದುತ್ತೇಳಿ, ಹೊಲಲಿ ಬಿತ್ತಿದೆ. ಅವ್ ಒಳ್ಳೆ ಪಸ್‌ಲ್ ಕೊಡ್ತ್. ನಾನ್ ತಿಂದೆ, ನೆರೆಮನೆ ಯುವುಕೆಲ್ಲ ಕೊಟ್ಟೆ, ನಿಮ್ಗೂ ಮಡಿಗ್ಯೊಳೆ ತಕಣೆಂತ ಕೊಟ್ಟತ್. ಈಗ ಗುರು ಇವರಿಬ್ಬರ ಕಡೆ ತಿರ್ಗಿ ಹೇಳ್ದೊ, ನೋಡಿ ಇದ ನಿಜವಾದ ವಿದ್ಯೆಂತ.

ನಮ್ಮಲ್ಲೂ ಕೆಲವು ಜನಗ ವಿದ್ಯೆ ಕಲ್ತ್ ಅದರ್‌ಂದ ತಾವು ಪ್ರಯೋಜನ ಪಡೆಯದುಲೆ, ಬೇರೆಯುವುಕು ಹೇಳಿ ಕೊಡ್ದುಲೆ. ಇಂತವು ಕಲ್ತ ವಿದ್ಯೆ ಕಡ್ಲೆಕಾಯಿಗೆ ಹುಳ ಹಿಡ್ದಂಗೆ ಆದೆ. ಆದ್ರೆ ಇನ್ನ್ ಕೆಲವು ಜನಗ ಒಳೊ, ಅವು ತಾವು ಕಲ್ತ ವಿದ್ಯೆಂದ ತಮಿಗೆ ಮಾತ್ರ ಪ್ರಯೋಜನ ಆದರೆ ಸಾಕ್‌ತೇಳಿಕಂಡ್ ಸುಮ್ಮನಿದ್ದವೆ. ಇವು ಮೊದಲನೆಯುವರಿಗಿಂತ ಮೇಲಾದರೂ ಸ್ವಾರ್ಥಿಗ. ಇಂಥವರ್‌ಂದ ಸಮಾಜ ಉದ್ಧಾರ ಆದುಲೆ. ಇನ್ನ್ ಮೂರ್ನೆಯುವನ ತರ ಬೇಕಾದಷ್ಟ್ ಜನಂಗ ಒಳೊ. ಇವು ಕಲ್ತ ವಿದ್ಯೆದ್ ಪ್ರಯೋಜನನ ತಾವೂ ಪಡ್‌ಕಂಡ್ ಬೇರೆಯುವ್ಕೂ ಮಾಡುವೆ. ಇವು ಬೂದಿ ಮುಚ್ಚಿದ ಕೆಂಡದಂಗೆ ಹೋದವೆ. ಇವುಕೆ ಯಾವ ಪ್ರಚಾರ ಆಗಲಿ, ಸನ್ಮಾನ ಆಗಲಿ ಬ್ಯಾಡ. ಇವರ್ನ ಸಮಾಜದ ನಿಸ್ವಾರ್ಥ ಸೇವಕರು ಅಂತ ಹೇಳ್ದು.

ನನ್ನ ಪ್ರಿಯ ಗೌಡ ಬಾಂಧವರೆ, ನೀವು ಸನ ಕಲ್ತ ವಿದ್ಯೆನ ಹುಳಹಿಡ್ದ್ ಹಾಳಾಕೆ ಬುಡ್‌ಬಡಿ. ಯಾವ ವಿದ್ಯೆ ಆದರ್‌ನೂ ವಿದ್ಯೆ ವಿದ್ಯೆನೆ. ಅದರ್‌ಂದ ನೀವು ನಿಸ್ವಾರ್ಥ ಸಮಾಜ ಸೇವಕರಾಗಿಂತ ಕೇಳಿಕಣೆ. ಆದರೆ ಇದ್ ಒಂದು ಬುಡಕಟ್ಟಿಗೆ ಮಾತ್ರ ಸೀಮಿತ ಆಗಿರದೆ, ನಮ್ಮ ಭವ್ಯ ಭಾರತಕ್ಕೆ, ಅಷ್ಟೆ ಅಲ್ಲ ಇಡೀ ವಿಶ್ವಕ್ಕೇ ಆಗಲಿತ ನನ್ನ ಆಶೆ.

○ ಬಿಟ್ಟೀರ ಜೋಂದಮ್ಮ ಶಂಭು,
ಬೆಂಗಳೂರ್.

ಕೆಲ್ಸದ ಗೂಡೆ

ದಿನಕ್ಕೆ ಒಂದೊಂದು ಬಟ್ಟೆ ಹಾಕಂಡ್
ಹೈ ಹೀಲ್ಡ್ ಚಪ್ಪಲ್ ಹಾಕಂಡ್
ಸ್ನೋ ಪೌಡರ್, ಲಿಪ್‌ಸ್ಟಿಕ್ ಮೆತ್ತಿಕಂಡ್
ಬರುವವಳ್‌ನ ನೋಡಿ ಮರ್‌ಳಾದೆ
ಶ್ರೀಮಂತ ಮನೆಯುವಳಿರಕೂತ ಗ್ಯಾನಮಾಡಿ
ಅವಳ ಧಿರುಸಿಗೆ ಬೆರ್‌ಗಾದೆ
ಹೆಂಗಾದರ್ ಮಾಡಿ ಅವಳ್ನ ಮದುವೆಯಾಕುತ
ಒಂದು ವರ್ಷಂದ ಅವಳ ಹಿಂದೆ ಹೋಗಿ
ಅವಳ್ನ ಒಲ್ಸಿಕಂಡ್ ಲವ್ ಮಾಡ್ದೆ
ಆದರೆ ಕಡೆಗೆ ಹೆಂಗೋ ಅವಳ ವಿಷಯ ತಿಳ್ದ್
ಗೊತ್ತಾತ್ ಅವ್ಳ್ ಮನೆ ಕೆಲ್ಸದ ಗೂಡೆತ.

○ ಯಾಲದಾಳು ಚಂದ್ರಕಲಾ, ಮಡಿಕೇರಿ.

ಸೂಚನೆ

ಕಳೆದ ಸಂಚಿಕೆಯಲ್ಲಿ ಪ್ರಕಟಗೊಂಡ
"ಪ್ರಶ್ನಾವಳಿ ಕಾರ್ಯಕ್ರಮ"ಕ್ಕೆ
ಉತ್ತರವನ್ನು ಮುಂದಿನ ಸಂಚಿಕೆ
ಯಲ್ಲಿ ಪ್ರಕಟಿಸಲಾಗುವುದು. —ಸಂ

ಹರ್ಕೆ ಫಲ

ಬಾಳ ವರ್ಷ ಮಕ್ಕ ಇಲ್ಲೆತ
ಬೊತ್ತಿದ್ದೊ ಅಪ್ಪ ಅವ್ವ ಹರ್ಕೆ
ಸಂತಾನ ಇಲ್ಲದ ಅಪ್ಪನ ಬಾಳ್
ಬಂಜರಿ ತೇಳುವ ಅವ್ವನ ಗೋಳ್
ಹೊಟ್ಟೆಗೆ ಇಲ್ಲದವಂಗೆ ಅನ್ನ ಸಿಕ್ಕಿದಂಗೆ
ದಾಹ ಆದವಂಗೆ ನೀರ್ ಸಿಕ್ಕಿದಂಗೆ
ಹಡಿಯಕೆ ಬೊತ್ತದೆ ಕೊಟ್ಟತ್ ದೇವ್ರು
ಗಂಡ್ ಕುಡಿ ಒಂದರ್ನ
ಅಪ್ಪನ ಕುಷಿನ ತಡಿಯಕೆ ಬೊತ್ತ್
ಅವ್ವನ ಆಶೆನೂ ಕೂಡಿ ಬಾತ್
ಹೊತ್ತ್‌ಕಂಡ ಹರ್ಕೆನ ತೀರ್ಸಿಕೆ
ಹೊರಟತ್ ಅಪ್ಪ ದೇವ್ರು ಸ್ಥಳಕೆ
ಊರವರ್ನ, ನೆಂಟರ್ನ ಕರ್ದೋ
ಕೂಸುನ ತೊಟೆಗಿಲ್ಗೆ ಹಾಕಿದೊ
ಕೂಸುನ ಎಲ್ಲವುಕೆ ಕೊಂಡಾಟ
ಕೂಸು ಮಾಡ್ತಿತ್ ಬಾಳ ಪುಂಡಾಟ.
ಹೆಸರ್ ಅವಂದ್ ಸಂಪ
ಮಾಡ್ತಿತ್ ಬಾಳ ರಂಪ
ಅಪ್ಪಂಗೆ ಓದ್ಸಕುತ ಆಶೆ ಇತ್ತ್
ಮಣ ಚಕ್ಕರ್ ಹೊಡಿತಿತ್ತ್
ಹತ್ತನೆಲಿ ಕುದ್ದತ್ ನಾಕ್ ವರ್ಷ
ಗಾಕ್ತ ಬುಟ್ಟಿದೊ ಐದನೆ ವರ್ಷ
ಗೆಯ್ಯತಿತ್ತ್ ಮಣ ಗದ್ದೆಲಿ
ಕೂರ್ತಿತ್ತ್ ಅಪ್ಪ ಐನುರಲಿ
ಅಪ್ಪಂಗು ಅವ್ವಂಗು ವಯ್ಸಾತ್
ಮಣಂಗೆ ಮದುವೆ ಪ್ರಾಯಾತ್
ಪೊರ್ಲುನ ಗೂಡೆನ ಹುಡ್ಕಿದೊ
ಡಿಗ್ರಿಯಾದ ಗೂಡೆನ ಕಟ್ಟಿದೊ
ಊರವುಕೆ ನೆಂಟ್ರುಗೆ ಕಾಗದ ಹಂಚಿದೊ
[illegible]ಜಲಿ ಮದುವೆನ ಮುಗ್ಸಿದೊ
ದಿನ ಕಳ್ತ್ ಹತ್ತ್ ಮಜಲಿ
ಕಾಂಬುತಿದ್ದೋ ಗೂಡೆನ ಕುಷಿಲಿ
ಗೂಡೆನು ಹೈದನೂ ಅಟ್ಟಲಿ ಮಲಗ್ತಿದ್ದೊ
ಗಂಟೆ ಒಂಬತ್ತಕ್ಕೆ ಮೆಲ್ಲ ಎಳ್ತಿದ್ದೊ
ಗೂಡೆ ಕೆಲ್ಸೊಂದ್ ಮಾಡ್ದುಲೆ
ಹೈದಂಗೆ ಇದ್ ಪರ್ವಾಗಿಲ್ಲೆ
ಕಡೆ ಕಡೆಗೆ ಹೈದ ಬೇಗ ಎಳ್ತಿತ್
ಗದ್ದೆಗೆ ಹೂಡಿಕೆ ಹೋತಿತ್ತ್
ಅವ್ವ ಕಾಫಿ ರೊಟ್ಟಿ ಮಾಡ್ತಿತ್
ಅಪ್ಪ ಗದ್ದೆಗೆ ಹೊರ್ಟಿತ್ತ್.
ಗೂಡೆ ತಲೆವರೆಗೆ ಕಂಬಳಿ ಹೊದೆತಿತ್ತ್
ಮಧ್ಯಾಹ್ನ ಮುಟ್ಟ ನಿದ್ದೆ ಹೊಡೆತಿತ್ತ್
ಕೋಸಿತ್ ಎದ್ದಂಗೆ ಚಪ್ಪಲ್
ಉಜ್ಜತಿತ್ತ್ ಒಂದು ಗಂಟೆ ಹಲ್ಲ್
ಅತ್ತೆಮಾವಂಗೆ ನೋಡಿ ಬಚ್ಚಿತ್
ಗಂಡನತ್ರ ಮೆಲ್ಲ ಗೊಣಗಿತ್
ಮಣಂಗೆ ಇದ್ ಸಿಟ್ಟಾತ್
ಅಪ್ಪಂಗೆ ಬಾರಿ ಬೊಯ್ತ್
ಅಲ್ಲಿಗೆ ಅವ್ವ ಬಾತ್
ಸೊಸೆಗೆ ತಾರಮಾರ ಬೊಯ್ತಿತ್
ಸೊಸೆಗೆ ಬಾತ್ ಸಿಟ್ಟ್
ಹಿಡ್ತ್ ಅತ್ತೆನ ಜುಟ್ಟ್
ಅಪ್ಪಂಗೆ ನೋಡಿಕೆ ಆಗದೆ
ಸೊಸೆನ ಎಳ್ದ್ ಹಾಕಿದೆ
ಮಣಂಗೆ ಬಾತ್ ಕೋಪ
ಇನ್ನೆಲ್ಲಿ ಉಟ್ಟ್ ಅವಂಗೆ ತಾಪ
ಅವ್ವನ ನೂಕಿ ಹಾಕಿತ್
ಅಪ್ಪಂಗೆ ಎರ್ಡ್ ಬಡ್ತ್
ಅಪ್ಪಂಗೂ ಮಣಂಗೂ ಪಾಲಾತ್
ಮನೆಲಿ ಎರ್ಡ್ ಒಲೆ ಆತ್
ಅಪ್ಪನು ಅವ್ವನು ಕಷ್ಟಂದ ಇದ್ದೊ
ಜಗಳ ಇಲ್ಲದೆ ಸುಖಂದ ಬಾಳ್ದೊ.

● ತೆಕ್ಕಡ ಬಿ. ಕುಮಾರ,
ಮುತ್ತಾರ್ಮುಡಿ.

ನನ್ನ ಸಿಕ್ಕ್ ತಾತ

ನಮ್ಮ ತಾತ ನಂಜಪ್ಪ ಮಿಲ್ಟ್ರಿಲಿದ್ದವು. ದಿನಾ ಬೆಳಿಗ್ಗೆ ಪರೇಡ್ ಗ್ರೌಂಡ್‌ಲಿ attendance ಹಾಕ್ವಾಕನ ಸ್ವಲ್ಪ ಜನ 'ಸಿಕ್ಕ್' ತೇಳ್ತಿದ್ದೊ ಗಡ. ಅಂತವರ್ನ ಎಳ್ದ್ ಸೈಡ್‌ಲಿ ನಿಲ್ಲಿಕೆ ಹೇಳಿ ಉಳ್ದವರ್ನ ಮಾತ್ರ ಜಾಗಿಂಗ್‌ಗೆ ಕರ್ಕಂಡ್ ಹೋಗ್ತಿದ್ದೊ ಗಡ. ಸರಿ, ತಾತಂಗೆ 'ಸಿಕ್ಕ್' [Sick] ತೇಳ್‌ರೆ ಎಂತತ ಗೊತ್ತ್ಲೆ. ಹೆಚ್ಚಾಗಿ ಓದಿದಂವ ಅಲ್ಲಲೆ, ಒಂದ್‌ದಿನ ಜಾಗಿಂಗ್‌ಂದ ತಪ್ಸಿಕಣಿಕೆ 'ಸಿಕ್ಕ್' ತೇಳ್ತ್ ಗಡ. ಆಗ ತಾತನ ಎಳ್ದ್ ಸೈಡ್‌ಲಿ ನಿಲ್ಸಿ ಉಳ್ದವರ್ನ ಜಾಗಿಂಗ್ ಕರ್ಕಂಡ್ ಹೋದೊ ಗಡ. ತಾತನ ಅಲ್ಲೇ ಗೋಡೆಲಿ ಗೆದ್ಲ್ ಹೊಡಿಯಕೆ ಬುಟ್ಟೊಗಡ. ಅಂದೇ ತಾತಂಗೆ ಗೊತ್ತಾದ್ 'ಸಿಕ್ಕ್' ತೇಳ್‌ರೆ 'ಹುಷಾರಿಲ್ಲೆ' ತೇಳಿತ.

○ ಎಡಿಕೇರಿ ಸುದರ್ಶನ್,
ಬೆಂಗಳೂರು.

ಬೈತಡ್ಕ ಕೆ. ಶಶಿಧರ್‌ಗೆ ವರುಷದ ವ್ಯಕ್ತಿ ಪ್ರಶಸ್ತಿ

ಅಂತರರಾಷ್ಟ್ರೀಯ ಮಟ್ಟದ ಮೂಕಾಭಿನಯ ಕಲಾವಿದ ಬೈತಡ್ಕ ಶಶಿಧರ್ ಅವರು ಬೆಂಗಳೂರಿನ 'ಸ್ಯಾಮ್ಸ್' ಪ್ರತಿಷ್ಠಾನದ "ಮ್ಯಾನ್ ಆಫ್ ದಿ ಇಯರ್-98" ಪ್ರಶಸ್ತಿಗೆ ಆಯ್ಕೆಯಾಗಿರುತ್ತಾರೆ. ಪ್ರಸ್ತುತ ವಿದೇಶದಲ್ಲಿ ಉದ್ಯೋಗದಲ್ಲಿದ್ದು, ಆರು ಅಂತರರಾಷ್ಟ್ರೀಯ ಪ್ರಶಸ್ತಿ ಹಾಗೂ ಭಾರತ ಸರಕಾರದ 'ರಾಜೀವ್ ಗಾಂಧಿ ರಾಷ್ಟ್ರೀಯ ಯುವ ಪ್ರಶಸ್ತಿ' ಪಡೆದಿರುವ ಇವರು, ಪಾಲೂರು ಗ್ರಾಮದ ಬೈತಡ್ಕ ಆರ್. ಕುಂಜಪ್ಪ ಎಂಬುವರ ಪುತ್ರರಾಗಿದ್ದಾರೆ.

Printed by M K Thammaiah and Published byKodagu Sangathi on behalf of Pattada P. Sheelamani and Printed at ASHIRWAD PRINTERS 180/A, 6th Main, Vinayakanagar, Mysore-12 Published at Mysore, Editor PATTADA P SHEELAMANI, No 35 1st Cross, 4th Block Near Divisional Telephone Office) Jayalakshmipuram, Mysore-570 012 Phone ; 516771

K.R.N.N. 240 10-01-96 TCI Kar. 09592

|| ಶ್ರೀ ವೆಂಕಟರಮಣ ಪ್ರಸನ್ನ ||





ಕಾವೇರಿ ನಾಡು ಸಹಕಾರಿ ಸಂಸ್ಥೆ
ಕಾವೇರಿ ನಾಡು ವಿದ್ಯಾ ಸಂಸ್ಥೆ
ಕಾವೇರಿ ನಾಡು ರೆಸಿಡೆನ್ಸಿಯಲ್ ಇಂಗ್ಲೀಷ್ ಸ್ಕೂಲ್

ಕಾಡುಕರೇನ ಹಳ್ಳಿ ಗ್ರಾಮ, ಮಹದೇವಪುರ, ಕಸಬಾ ಹೋಬಳಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕಾವೇರಿ ನಾಡು ವಿದ್ಯಾಸಂಸ್ಥೆಯ ಆವರಣದಲ್ಲಿ ಪ್ರಕೃತಿದತ್ತವಾದ ರೀತಿಯಲ್ಲಿ ಪ್ರತಿಷ್ಠಾಪಿಸಿದ ಶ್ರೀ ಕಾವೇರಿ ಮಾತೆ ವಿಗ್ರಹದ, ಉದ್ಘಾಟನಾ ಸಮಾರಂಭ ಮತ್ತು ತೃತೀಯ ವರ್ಷದ ಕೈಲ್ ಮುಹೂರ್ತ ಹಬ್ಬದ ಆಚರಣೆಯ ಆಹ್ವಾನ ಪತ್ರಿಕೆ

ದಿನಾಂಕ: 13-9-1998 ಆದಿತ್ಯವಾರ ಬೆಳಿಗ್ಗೆ 9-00 ಘಂಟೆಗೆ ಕೈಲ್ ಮುಹೂರ್ತ ಹಬ್ಬ ಮಾಡೋಕುಂತೇಳಿ ತೀರ್ಮಾನ ಮಾಡ್ಯೊಳೊ. ಸಮಾರಂಭೋತ್ಸವಕ್ಕೆ ನೀವೆಲ್ಲ ಸಂಸಾರ ಸಮೇತ ಬಂದ್ ಈ ಕಾರ್ಯಕ್ರಮನ ಚಂದ ಕಾಣೆಪೋಕುಂತೇಳುವೆ.

ತಮ್ಮ ಆಗಮನಾಭಿಲಾಷಿ : **ಶ್ರೀಮತಿ ಮತ್ತು ಶ್ರೀ ಅಮ್ಮಾಜೀರ ಎಸ್. ಪೊನ್ನಪ್ಪ ಮತ್ತು ಕಾವೇರಿ ನಾಡಿನ ಪ್ರೋತ್ಸಾಹಕರು ಹಾಗೂ ಸದಸ್ಯರು**

ದಾನಿಗಳು :
1. **ಕಾವೇರಿ ಮಾತೆ ವಿಗ್ರಹ :** ಶ್ರೀ ಎನ್. ಕೃಷ್ಣಪ್ಪ ಮತ್ತು ಸ್ನೇಹಿತರು
2. ಗಣೇಶ ವಿಗ್ರಹ : ಅಣ್ಣಚೀರ ಶ್ರೀಮತಿ ಮತ್ತು ಶ್ರೀ ಚಿಣ್ಣಪ್ಪನವರು
3. ಅಯ್ಯಪ್ಪ ಸ್ವಾಮಿಯ ವಿಗ್ರಹ : ಕೋಳಿ ಬೈಲು ಶ್ರೀಮತಿ ಮತ್ತು ಶ್ರೀ ಎಂ. ನಾಣಯ್ಯನವರು

ಮುಖ್ಯ ಅತಿಥಿಗಳು :
1. ಶ್ರೀ ಕುರುಂಜಿ ವೆಂಕರಮಣ ಗೌಡರು, ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್ (ರಿ.) ಕುರುಂಜಿಭಾಗ್, ಸುಳ್ಯ.
2. ಶ್ರೀ ಎನ್. ಎಸ್. ದೇವಿಪ್ರಸಾದ್, ಸಂಚಾಲಕರು, ಪ್ರಜಾವೇದಿಕೆ, ಸಂಪಾಜೆ
3. ಶ್ರೀ ಡಿ. ಎಸ್. ಮಾದಪ್ಪ, ಶಾಸಕರು, ಮಡಿಕೇರಿ ಕ್ಷೇತ್ರ
4. ಶ್ರೀ ಅಂಬರೀಶ್, ಲೋಕಸಭಾ ಸದಸ್ಯರು, ಮಂಡ್ಯ ಕ್ಷೇತ್ರ
5. ಶ್ರೀ ಗಂಗಹನುಮಯ್ಯ, ಬೆಂಗಳೂರು ಗ್ರಾ. ಜಿಲ್ಲಾ ಜನತಾದಳದ ಅಧ್ಯಕ್ಷರು ಬಿ ಡಿ.ಸಿ.ಸಿ. ಬ್ಯಾಂಕ್ ಛೇರ್ಮನ್
6. ಶ್ರೀ ಬೈತಡ್ಕ ಎ. ಜೋಯಪ್ಪನವರು, ಡಿ.ವೈ.ಎಸ್.ಪಿ , ಲೋಕಾಯುಕ್ತ, ಬೆಂಗಳೂರು
7. ಶ್ರೀ ಡಿ. ಎಸ್. ಆನಂದ, ಅಧ್ಯಕ್ಷರು ಕೊಡಗು ಮತ್ತು ದ.ಕ. ಗೌಡ ಸಮಾಜ, ಬೆಂಗಳೂರು
8. ಶ್ರೀ ತೋಟಂಬೈಲು ಬೆಳ್ಯಪ್ಪ, ಅಧ್ಯಕ್ಷರು, ಕೊಡಗು ಗೌಡ ಸಮಾಜ, ಬೆಂಗಳೂರು

ವಿ. ಸೂ. : ಬೆಳಿಗ್ಗೆ 8-30ಕ್ಕೆ ಲಘು ಉಪಹಾರವನ್ನು ಏರ್ಪಡಿಸಲಾಗಿದೆ.

: : ಕಾರ್ಯಕ್ರಮಗಳು : : ಸರ್ವರಿಗೂ ಆದರದ ಸ್ವಾಗತ.

1. ಪ್ರಾರ್ಥನೆ 2. ಕಾವೇರಿ ಮಾತೆಯ ವಿಗ್ರಹದ ಉದ್ಘಾಟನೆ 3. ಸಾಂಸ್ಕೃತಿಕ ಕಾರ್ಯಕ್ರಮ
4. ಸ್ವಾಗತ ಹಾಗೂ ಪರಿಚಯ ಭಾಷಣ 5. ಕಾವೇರಿ ನಾಡು ಸಹಕಾರಿ ಸಂಸ್ಥೆಯ ಅಭಿವೃದ್ಧಿ ಮತ್ತು ಮುಂದಿನ ಕಾರ್ಯಕ್ರಮಗಳ ಪರಿಚಯ 6. ಕಾವೇರಿ ನಾಡು ಸಹಕಾರಿ ಸಂಸ್ಥೆಯ ಸದಸ್ಯರಿಂದ ಭಾಷಣ
7. ಅಧ್ಯಕ್ಷರ ಭಾಷಣ 8. ವಂದನಾರ್ಪಣೆ. 9. ಔತಣ ಕೂಟ 10. ಕೊಡಗಿನ ಓಲಗ ಕುಣಿತ

ಆರ್.ಎಸ್.ವಿ.ಪಿ. ದೂರವಾಣಿ : 642822, 6671721, 6679282